
ಜನಮನದ ದನಿ


# ಪ್ರಜೋದಯ


ಸಂಪಾದಕ : ಜೆ.ಆರ್. ಕೆಂಚೇಗೌಡ

27 ಏಪ್ರಿಲ್ 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 48 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ 23 ರನ್‌ಗೆ 5 ವಿಕೆಟ್ ಪಡೆದು ಸಂಭ್ರಮಿಸಿದ ಲಖನೌ ಸೂಪರ್ ಜೈಂಟ್ಸ್ ತಂಡದ ಮೊಹ್ಸಿನ್ ಖಾನ್ ...



ಕಾಡಿನಲ್ಲಿ ಬೆಳೆಯುವ ದ್ರಾಕ್ಷಿ ಹಣ್ಣುಗಳು » 2


ಸಿಎಸ್‌ಕೆ ಎದುರು ಟೈಟನ್ಸ್‌ಗೆ ಸುಲಭ ಜಯ » 3


ಗುಂಡಿನ ದಾಳಿ : ಡೊನಾಲ್ಡ್ ಟ್ರಂಪ್ ಪಾರು » 4


# ಯಾವಾಗ ಏನು ಆಗಬೇಕೋ ಆಗುತ್ತೆ: ಡಿ.ಕೆ.ಶಿ.

## ಪಕ್ಷದ ಮೇಲೆ ವಿಶ್ವಾಸವಿದೆ | ದೆಹಲಿ ಪ್ರವಾಸ ಕುರಿತು ಡಿಸಿಎಂ ಪ್ರತಿಕ್ರಿಯೆ

• ಪ್ರಜೋದಯ ವರದಿ

**ಬೆಂಗಳೂರು:** ಪಕ್ಷದ ಮೇಲೆ ಸಂಪೂರ್ಣ ವಿಶ್ವಾಸವಿದ್ದು, ಯಾವಾಗ ಏನು ಆಗಬೇಕೋ ಅದು ಆಗುತ್ತದೆ. ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತದೆಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.

ಎರಡು ದಿನ ದೆಹಲಿ ಪ್ರವಾಸ ಕೈಗೊಂಡಿದ್ದ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ನಾಯಕತ್ವ ಬದಲಾವಣೆ ಕುರಿತು ಚರ್ಚಿಸಿದ್ದಾರೆ ಎನ್ನಲಾಗಿದ್ದು, ಈ ಸಂಬಂಧ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು. ಇನ್ನು ಮುಂದೆ ರಾಜಕೀಯ ವಿಚಾರವಾಗಿ ಮಾಧ್ಯಮಗಳ ಮುಂದೆ ಮಾತನಾಡುವುದಿಲ್ಲ. ನಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲ. ಯಾವ ರಾಜಕೀಯವೂ ಇಲ್ಲ. ಏನೇನೂ ತೀರ್ಮಾನ ಆಗಿವೆಯೋ ಅವು ಚಾಲ್ತಿಗೆ ಬರಲಿವೆಯೆಂದು ಸ್ಪಷ್ಟಪಡಿಸಿದರು.

ಪಕ್ಷದಲ್ಲಿ ಗೊಂದಲಗಳಿವೆ ಎಂಬ ಸಚಿವ ಸತೀಶ್ ಜಾರಕಿಹೊಳಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, ಯಾವ ಸಮಯದಲ್ಲಿ ಏನು ಮಾಡಬೇಕೋ ಅದನ್ನು ಪಕ್ಷ ಮಾಡುತ್ತದೆ.



ನಮಗೆ ಪಕ್ಷದ ಮೇಲೆ ವಿಶ್ವಾಸವಿದೆ. ಏನು ಮಾಡಬೇಕು ಎಂಬುದು ಅವರಿಗೆ ಗೊತ್ತಿದೆ ಎಂದು ತಿಳಿಸಿದರು. ನಾಯಕತ್ವ ಬದಲಾವಣೆ ವಿಚಾರವಾಗಿ ಮಾಧ್ಯಮದವರಿಗೆ ಗೊಂದಲ ಇರಬಹುದು. ನಾನು ಈ ಬಗ್ಗೆ ಯಾವತ್ತು ಚರ್ಚೆ ಮಾಡುವುದಿಲ್ಲ. ಹೈಕಮಾಂಡ್ ಯಾವಾಗ ಯಾವ ಸೂಚನೆ ನೀಡುತ್ತದೆಯೋ ಆವಾಗ ಅದನ್ನು ಪಾಲಿಸುತ್ತೇವೆಂದು ನಾನು ಮತ್ತು ಮುಖ್ಯಮಂತ್ರಿ ಅವರು ಹೇಳಿದ್ದು, ಅದರಂತೆ ನಡೆಯುತ್ತೇವೆಂದು ತಿಳಿಸಿದರು.

**ಹುಟ್ಟುಹಬ್ಬಕ್ಕೆ ಫ್ಲೆಕ್ಸ್, ಬ್ಯಾನರ್ ಹಾಕಬೇಡಿ**

ನನ್ನ ಜನ್ಮ ದಿನದಂದು ಯಾರೂ ಫ್ಲೆಕ್ಸ್ ಹಾಗು ಬ್ಯಾನರ್‌ಗಳನ್ನು ಹಾಕುವಂತಿಲ್ಲ. ಹಾಕಿದರೆ ಅವರ ವಿರುದ್ಧ ಪಾಲಿಕೆ ವತಿಯಿಂದ ಕ್ರಮ ಜರುಗಿಸಲು ಸೂಚಿಸುತ್ತೇನೆ. ಅವಶ್ಯಕತೆ ಇದ್ದರೆ ಹಣ ಪಾವತಿಸಿ ಜಾಹೀರಾತು ಕೊಡಬಹುದು. ರಸ್ತೆಯಲ್ಲಿ ಫ್ಲೆಕ್ಸ್ ಹಾಕಿ ರಸ್ತೆಯ ಸೌಂದರ್ಯ ಹಾಳು ಮಾಡಬಾರದು. ಇದು ನಾನು ಎಲ್ಲರಿಗೂ ಕೊಡುತ್ತಿರುವ ಸೂಚನೆ. ಅನಧಿಕೃತವಾಗಿ ರಸ್ತೆಯಲ್ಲಿ ಫ್ಲೆಕ್ಸ್ ಹಾಕಿದರೆ ದುಬಾರಿ ದಂಡ ವಿಧಿಸಿ ಎಂದು ಆಯುಕ್ತರಿಗೆ ಸೂಚಿಸಿದ್ದೇನೆಂದರು.

**ಕೊಟ್ಟ ಮಾತಿನಂತೆ ಒಳಮೀಸಲಾತಿ**

ಒಳಮೀಸಲಾತಿ ವಿಚಾರವಾಗಿ ಬಿಜೆಪಿ ಮಾಡುತ್ತಿರುವ ಟೀಕೆಗಳಿಗೆ ಕಿವಿಗೊಡಬಾರದು. ಅವರ ಕೈಯಲ್ಲಿ ಏನೂ ಮಾಡಲು ಆಗಿಲ್ಲ. ನಾವೇನು ಮಾತು ಕೊಟ್ಟಿದ್ದೆವೋ ಆ ಮಾತಿನ ಪ್ರಕಾರ ನಡೆದಿದ್ದೇವೆ. ಹಿಂದೆ ಶೇ. 17 ಮೀಸಲಾತಿ ಇದ್ದಾಗಲೂ ಕೂಡ ನಾವು ಸರಿ ಯಾಗಿಯೇ ಮಾಡಿದ್ದೆವು. ಈಗಲೂ ಕೂಡ ಬಹಳ ಸರಳವಾಗಿ ಮಾಡಿದ್ದೇವೆ. ಬಲ ಹಾಗು ಎಡ ಪಂಗಡಗಳಲ್ಲಿ ಮೊದಲು ಯಾರಿಗೆ, ನಂತರ ಯಾರಿಗೆ ಎಂಬ ಪ್ರಶ್ನೆ ಇತ್ತು. ಅದಕ್ಕೆ ಬೇಕಾದ ಪರಿಹಾರ ದಾರಿ ಕಂಡು ಹಿಡಿಯಲಾಗಿದೆ. ಬಲವಿರಲಿ, ಎಡವಿರಲಿ, ಲಂಬಾಣಿ ಇರಲಿ, ಭೋವಿ ಇರಲಿ ಎಲ್ಲರಿಗೂ ನ್ಯಾಯ ಒದಗಿಸುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. 30-40 ವರ್ಷಗಳಿಂದ ಇದ್ದಂತಹ ಸಮಸ್ಯೆಯನ್ನು ಬಗೆಹರಿಸಿದ್ದೇವೆ. ಎಲ್ಲರಿಗೂ ನ್ಯಾಯ ಕೊಡುತ್ತಿದ್ದೇವೆ ಎಲ್ಲರೂ ಒಟ್ಟಾಗಿ ಹೋಗಬೇಕೆಂದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸದಿದ್ದರೆ ನ್ಯಾಯಾಂಗ ನಿಂದನೆ ಅರ್ಜಿ ಹಾಕುತ್ತೇವೆಂಬ ಎ.ಪಿ.ರಂಗನಾಥ್ ಅವರ ಹೇಳಿಕೆಗೆ ಉತ್ತರ ನೀಡಿದ ಅವರು, ಮೊದಲು ಮಾಡಲಿ ಯಾರು ಬೇಡ ಅಂತಿದ್ದಾರೆ. ನಾವೇನು ಚುನಾವಣೆ ಮಾಡೋದಿಲ್ಲ ಅಂತ ಹೇಳಿದ್ದೇವಾ. ಕಾರ್ಪೊರೇಷನ್ ಹಾಗು ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ನಾವು ಸಿದ್ಧರಿದ್ದೇವೆಂದು ಸ್ಪಷ್ಟಪಡಿಸಿದರು.

### ಮುಖ್ಯಮಂತ್ರಿ ಶಕ್ತಿಹೀನರಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಕ್ತಿಹೀನರಾಗಿದ್ದಾರೆಂಬು ದೆಲ್ಲ ಸುಳ್ಳು. ಒಳ್ಳೆಯ ಆಡಳಿತ ನೀಡುತ್ತಿದ್ದಾರೆ. ಜನರಿಗೆ ಕೊಟ್ಟ ಮಾತಿನಂತೆ ಕೆಲಸ ಮಾಡುತ್ತಿದ್ದಾರೆಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರು ಪ್ರತಿಕ್ರಿಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿಯೊಂದು ಪಕ್ಷದಲ್ಲಿ ಲೀಡರ್‌ಗಳು ಹೈಕಮಾಂಡ್ ಭೇಟಿ ಮಾಡುತ್ತಾರೆ. ಅವರ ಸ್ವಂತ ಹಿತಾಸಕ್ತಿ ಇರುತ್ತದೆ. ನಮ್ಮ ಸರ್ಕಾರದಲ್ಲಿ ಹೊಸ ಬೆಳವಣಿಗೆಯಲ್ಲ. ಹಿಂದಿನ ಬಿಜೆಪಿ ಸರ್ಕಾರದಲ್ಲೂ ಹೀಗೆ ಇತ್ತು. ಹೈಕಮಾಂಡ್ ಭೇಟಿ ವಿಚಾರಕ್ಕೆ ಆದ್ಯತೆ ನೀಡುವ ಅವಶ್ಯವಿಲ್ಲವೆಂದರು. ಉಪಚುನಾವಣೆ ಬಳಿಕ ರಾಜ್ಯ ರಾಜಕಾರಣದಲ್ಲಿ ಬದಲಾವಣೆ ವಿಚಾರವಾಗಿ ಮಾತನಾಡುವುದೇ ಅಪ್ರಸ್ತುತ. ಆ ರೀತಿ ಯಾರು ಹೇಳಿದ್ದಾರೆ ಗೊತ್ತಿಲ್ಲ. ಅವರನ್ನೇ ಕೇಳಿ, ಈ ಬಗ್ಗೆ ನನಗೆ ಗೊತ್ತಿಲ್ಲ ಎಂದರು.

# ಅನಾರೋಗ್ಯ ಪರಿಸ್ಥಿತಿ ದುರ್ಬಳಕೆಗೆ ಯತ್ನ: ಹೆಚ್.ಡಿ.ಕುಮಾರಸ್ವಾಮಿ

• ಪ್ರಜೋದಯ ವರದಿ

**ಚಿತ್ರದುರ್ಗ:** ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಕೆಲವರು ಇಂತಹ ಸಂದರ್ಭವನ್ನು ದುರ್ಬಳಕೆ ಮಾಡಿಕೊಳ್ಳುವುದರಲ್ಲಿ ನಿಪುಣರಾಗಿದ್ದಾರೆಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಪರೋಕ್ಷವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ಸಚಿವ ಸುಧಾಕರ್ ಅವರು ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. ಈ ವೇಳೆ ನಾನು ಜೆಡಿಎಸ್ ಸ್ಥಾನದ ಬಗ್ಗೆ ಚರ್ಚೆ ಮಾಡುವುದಿಲ್ಲ. ಹಿರಿಯೂರು ಸೇರಿ ಬೇರೆ ಕ್ಷೇತ್ರದ ಬಗ್ಗೆಯೂ ಮಾತಾಡುವುದಿಲ್ಲ. ಆದರೆ ಆಸ್ಪತ್ರೆಯೊಳಗೆ ಏನು ನಡೆಯುತ್ತಿದೆ ಎಂಬುದನ್ನು ನೋಡಬೇಕು. ಆ ವ್ಯಕ್ತಿ ಎಷ್ಟು ನೋವು ಅನುಭವಿಸುತ್ತಿದ್ದಾರೋ ಪಾಪ. ಯಾವ ಕಾರಣಕ್ಕೆ



ಕೆಲ ವಿಷಯ ಮುಚ್ಚಿಟ್ಟಿದ್ದಾರೆಂಬುದು ತಿಳಿಯಬೇಕು. ಆ ವ್ಯಕ್ತಿಯಿಂದ ಹೆಬ್ಬೆಟ್ಟು ಒತ್ತಿಸಿಕೊಳ್ಳುವ ಪ್ರಯತ್ನ ನಡೆದಿದೆಯೇ ಎಂದು ಸಂಶಯ ವ್ಯಕ್ತಪಡಿಸಿದರು.

ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಅಹಿಂದ ಸಮಾವೇಶ ನಡೆಸುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ ಅವರು, ಕೈ ನಾಯಕರು ಕುರ್ಚಿ ಉಳಿಸಿಕೊಳ್ಳಲು ಅಹಿಂದ ಸಮಾವೇಶ ಮಾಡುತ್ತಿದ್ದಾರೆ. ನಮ್ಮ ಭಿಕ್ಷೆಯಿಂದ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ ಎಂದು ಅಹಿಂದ ಸಮುದಾಯದವರು ಹೇಳುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಸಮಾವೇಶ ಮಾಡಬೇಕಾ. ದುಡ್ಡು ಖರ್ಚು ಮಾಡಿ ಜನರನ್ನು ಸೇರಿಸುವುದೇ ಕಾಂಗ್ರೆಸ್ ಸಾಧನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಕೆಂಚಾಂಬ ದೇವಿ ದೊಡ್ಡ ಜಾತ್ರೆಗೆ ವಿಧ್ಯುಕ್ತ ತೆರೆ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನ ಕೆ. ಹೊಸಕೋಟೆ ಹೋಬಳಿ ಹರಿಹಳ್ಳಿ ಗ್ರಾಮದಲ್ಲಿ ನೆಲೆಸಿರುವ ಹಾಸನಾಂಬ ದೇವಿ ಹಿರಿಯ ಸಹೋದರಿ ಕೆಂಚಾಂಬ ದೇವಿಯ ದೊಡ್ಡ ಜಾತ್ರೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಭಾನುವಾರ ಅದ್ದೂರಿಯಾಗಿ ಜರುಗಿತು.

ಏ.19 ರಂದು ಪ್ರಾರಂಭವಾಗಿದ್ದ ಶ್ರೀ ಕೆಂಚಾಂಬ ಜಾತ್ರೆ ಏ.26ರಂದು ಸಂಪನ್ನಗೊಂಡಿತು. ಜಾತ್ರಾ ಮಹೋತ್ಸವ ಅಂಗವಾಗಿ ವಿವಿಧ ಧಾರ್ಮಿಕ ಕೈಂಕರ್ಯಗಳು ನೆರವೇರಿದವು. ದೇವಿಯ ಮೂಲ ದೇವಸ್ಥಾನದಲ್ಲಿ ಏ. 19ರ ಭಾನುವಾರ ಪಾದಪೂಜೆ, ಸಾರು, ವಸಂತ ಸೇವೆ ಮೂಲಕ ಜಾತ್ರೆ ವಿಧ್ಯುಕ್ತವಾಗಿ ಆರಂಭ ಪಡೆಯಿತು. ಏ. 22ರಂದು ಪಾದ ತೂಗುವ ಜಾತ್ರೆ ನಡೆದು ನಂತರ ವಸಂತ ಉತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನೆರವೇರಿದವು.

ಏ.24ರಂದು ಉಕ್ಕುಂದ ಪೂಜೆ ನಡೆದವು. ಏ.25ರ ಶನಿವಾರ ರಾತ್ರಿ 8 ಗಂಟೆಗೆ ಮೂಲ ದೇವಸ್ಥಾನದಲ್ಲಿ ಉದ್ವಾರ್ಚನೆ, ಸಪ್ತಮಾತೃಕಾ ಸಹಿತ ಶ್ರೀಕೆಂಚಾಂಬಿಕೆಗೆ ಮಹಾಪೂಜೆ, ಸುಗ್ಗಿ, ಮಹಾಮಂಗಳಾರತಿ ಜರುಗಿದವು. ಏ.26ರ ಭಾನುವಾರ ಬೆಳಿಗ್ಗೆ ಮೂಲ ದೇವಸ್ಥಾನದಿಂದ ಹೊರಟ



ದೇವಿಯ ಒಡವೆ, ಮುಖ, ಪಾದುಕೆ, ಬೆಳ್ಳಿ ಹೆಡಗೆ, ಪುಷ್ಪ, ಉತ್ಸವ ಮೂರ್ತಿಗಳ ಮೆರವಣಿಗೆ ದೇವಾಲಯಕ್ಕೆ ತಲುಪಿ ಅಲಂಕಾರ, ಅಭಿಷೇಕ, ಬಲಿ ಪ್ರದಾನದ ನಂತರ ಮಹಾಮಂಗಳಾರತಿ ಸಂಪನ್ನವಾಯಿತು.

ಮಧ್ಯಾಹ್ನ 2 ಗಂಟೆಗೆ ಬನ್ನಿ ಮಂಟಪದಲ್ಲಿ ಶ್ರೀದೇವಿ ಹಾಗು ವೀರಭದ್ರ ದೇವರ (ಭಂಟ) ಸಮಾಗಮವಾಯಿತು. ದೇವಿಯ ದರ್ಶನಕ್ಕೆ ಆಗಮಿಸಿದ ಭಕ್ತರಿಗೆ ರಾತ್ರಿ 10.30ರ ವರೆಗೂ ದೇವಿಯ ಪಾದ ಮುಟ್ಟಿ ನಮಸ್ಕರಿಸಲು ಅವಕಾಶ ಕಲ್ಪಿಸಿಕೊಡಲಾಗಿತ್ತು. ಮಂಗಳಾರತಿ, ಅಲಂಕಾರ ವಿಸರ್ಜನೆಗೊಂಡು ಮೂಲ ದೇವಸ್ಥಾನಕ್ಕೆ (ಬನ) ಶ್ರೀದೇವಿಯ ಮೆರವಣಿಗೆ ಸೇರಿದ ಬಳಿಕ ಜಾತ್ರಾ ಮಹೋತ್ಸವಕ್ಕೆ ತೆರೆ ಬಿದ್ದಿತು.

ಏ.27ರ ಸೋಮವಾರದಿಂದ ಮೇ 2ರ ವರೆಗೂ ದೇವಸ್ಥಾನದ ಬಾಗಿಲನ್ನು ಮುಚ್ಚಲಾಗುತ್ತದೆ. ಆ ಮೇಲೆ ದೇವಸ್ಥಾನದ ಬಳಿ ಯಾರೂ ಸುಳಿಯುವಂತಿಲ್ಲ. ಮೇ 3ರಂದು ಬಾಗಿಲು ತೆರೆಯುವ ಜಾತ್ರೆ ನಡೆದು ದೇವಿಗೆ ವಿಶೇಷ ಪೂಜೆ ಕೈಂಕರ್ಯಗಳು ನಡೆಯುತ್ತವೆ.

ತಹಶೀಲ್ದಾರ್ ಮಲ್ಲಿಕಾರ್ಜುನ್ ಹಾಗು ಆಲೂರು ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಮೋಹನ್ ರೆಡ್ಡಿ ಹಾಗು ಸಿಬ್ಬಂದಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು. ಶಾಸಕ ಸಿಮೆಂಟ್ ಮಂಜು, ಮಾಜಿ ಶಾಸಕ ಹೆಚ್.ಕೆ. ಕುಮಾರಸ್ವಾಮಿ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಕೆ.ಎಸ್.ಮಂಜೇಗೌಡ ಮತ್ತಿತರರು ಪಾಲ್ಗೊಂಡಿದ್ದರು.

# ಬಿಸಿಲ ಬೇಗೆಗೆ ಬಸವಳಿದ ಜಿಲ್ಲೆಯ ಜನರು

## ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ ತಾಪಮಾನ | ಆರೋಗ್ಯದ ಮೇಲೆ ಪರಿಣಾಮ ಸಾಧ್ಯತೆ

• ಪ್ರಜೋದಯ ವರದಿ

**ಹಾಸನ:** ಬಡವರ ಊಟಿ ಎಂದೇ ಹೆಸರು ಗಳಿಸಿರುವ ಜಿಲ್ಲೆಯಲ್ಲಿ ಈ ಬಾರಿ ಬಿಸಿಲ ಬೇಗೆ ತೀವ್ರವಾಗಿದ್ದು, ನೆತ್ತಿ ಸುಡುವ ಬಿಸಿಲಿನ ಝಳ, ಆಯಾಸ ತರುವ ಬೆವರಿಗೆ ಜನರು ಬಸವಳಿದಿದ್ದಾರೆ.

ಆಹ್ಲಾದಕರ ವಾತಾವರಣಕ್ಕೆ ಹೆಸರಾಗಿದ್ದ ಹಾಸನ ಈಗ ಕಾದ ಕಾವಲಿಯಂತಾಗಿದೆ. ವಾತಾವರಣದಲ್ಲಿ ತೇವಾಂಶ ಕಡಿಮೆಯಾಗಿ ಉಷ್ಣಾಂಶ ನಿರೀಕ್ಷೆ ಮೀರಿ ಹೆಚ್ಚಾಗಿ ಸಾರ್ವಜನಿಕರು ತತ್ತರಿಸಿದ್ದಾರೆ. ಕಳೆದ ಒಂದು ತಿಂಗಳಿನಿಂದ ಬಿಸಿಲಿನ ತಾಪಕ್ಕೆ ಪ್ರಯಾಸ ಪಡುವಂತಾಗಿದೆ. ದಿನದಿಂದ ದಿನಕ್ಕೆ ತಾಪಮಾನ ಹೆಚ್ಚುತ್ತಲೇ ಇದ್ದು, ಭಾನುವಾರ 35 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಕೆಂಡದಂತಹ ಬೇಗೆಗೆ ಬೆಳಿಗ್ಗೆ 11 ರಿಂದ ಸಂಜೆ 4ರ ವರೆಗೆ ಜನಸಂಚಾರವೂ ಕಡಿಮೆಯಾಗಿದೆ. ಉತ್ತರ ಕರ್ನಾಟಕದ ಜಿಲ್ಲೆಗಳಿಗೂ ಹಾಸನಕ್ಕೂ ವ್ಯತ್ಯಾಸವೇ ಇಲ್ಲದಂತಾಗಿದೆ. ಬೆಳಿಗ್ಗೆ 9ರ ವರೆಗೆ ವಾಕಿಂಗ್ ಮಾಡುತ್ತಿದ್ದ ಜನರು ಈಗ ಆದಷ್ಟು



ಬೇಗನೇ ಮನೆ ಸೇರಿಕೊಳ್ಳುತ್ತಿದ್ದಾರೆ. ಬೆಳಿಗ್ಗೆ 10 ಗಂಟೆ ವೇಳೆಗೆ ಮೈ ಸುಡುವಷ್ಟು ಬಿಸಿಲು ಕಾಣಿಸಿಕೊಳ್ಳುತ್ತಿದೆ. ಬಿಸಿಲ ಬೇಗೆಯಿಂದ ಕೆಲ ರೋಗಗಳು ಜನರನ್ನು ಕಾಡಲು ಶುರು ಮಾಡಿವೆ. ಈ ಋತುಮಾನದ ಖಾಯಿಲೆಗಳಾದ ಕಾಲರಾ, ವಿಷಮಶೀತ, ಜ್ವರ, ಕಣ್ಣಿನ ತೊಂದರೆ, ವೈರಲ್ ಸೋಂಕು, ನಿರ್ಜಲೀಕರಣ, ಹೊಟ್ಟೆ ನೋವು, ತಲೆ ಸುತ್ತು, ಅತಿಯಾದ ಸೂರ್ಯ ಕಿರಣದಿಂದ ಚರ್ಮ ರೋಗಗಳು ಕಾಣಿಸಿಕೊಳ್ಳಲಿದೆ ಎಂದು ವೈದ್ಯರು ಹೇಳಿದ್ದಾರೆ.

ಸನ್‌ಬರ್ನ್, ಸನ್‌ಟ್ಯಾನ್, ಸೋಲಾರ್ ಅರ್ಟಿಕೆರಿಯಾ, ಅಲರ್ಜಿ, ಚರ್ಮದ ಮೇಲೆ, ನೆರಿಗೆ, ತುಟಿಗಳ ಒಣಗುವಿಕೆ, ಮುಖದ ಮೇಲೆ ಸಣ್ಣ ಮಚ್ಚೆಗಳಾಗುವುದು ಹೀಗೆ ನಾನಾ ಸಮಸ್ಯೆಗಳು ಎದುರಾಗಬಹುದು. ಆದ್ದರಿಂದ ಇವುಗಳ ತಡೆಗಟ್ಟುವಿಕೆ ಮತ್ತು ನಿವಾರಣೆ ಮುಖ್ಯವಾಗಿದೆ. ಬಿಸಿಲಿನಲ್ಲಿ ಓಡಾಡುವ ಸಂದರ್ಭಗಳಲ್ಲಿ ಮುಖಕ್ಕೆ ಸೂರ್ಯನ ಕಿರಣಗಳು ಬೀಳದಂತೆ ರಕ್ಷಣೆಯಾಗಿ ಟೋಪಿ ಧರಿಸುವುದು ಅಥವಾ ಛತ್ರಿ ಬಳಸುವುದು ಸೂಕ್ತ. ಸೂರ್ಯನ ಕಿರಣಗಳು ಕಣ್ಣಿಗೆ ತಾಗದಂತೆ ಕಪ್ಪು ಕನ್ನಡದ ಧರಿಸಬಹುದು. ದೇಹದ ತೇವಾಂಶ ಸಮ ಪ್ರಮಾಣದಲ್ಲಿರಲು ಹೆಚ್ಚಾಗಿ ನೀರು ಸೇವಿಸಬೇಕು ಎನ್ನುತ್ತಾರೆ ವೈದ್ಯರು.

ಕಳೆದ ಕೆಲವು ದಿನಗಳಿಂದ ಜಿಲ್ಲೆಯಲ್ಲಿ ಸೂರ್ಯನ ಶಾಖ ಹೆಚ್ಚಾಗಿದ್ದು, ಇನ್ನೂ ಕೆಲವು ದಿನ ಇದೇ ಉಷ್ಣಾಂಶ ಮುಂದುವರಿಯಲಿದೆ ಎಂದು ಹವಾಮಾನ ತಜ್ಞರು ಹೇಳಿದ್ದಾರೆ. ವಾಹನಗಳ ಸಂಖ್ಯೆ ಹೆಚ್ಚಳ, ಕಟ್ಟಡಗಳ ನಿರ್ಮಾಣ, ವಾಯು ಮಾಲಿನ್ಯದಿಂದಾಗಿ ಈ ಬಾರಿ ಬಿಸಿಲು ಹೆಚ್ಚಾಗಿದೆ.

**ತಂಪು ಪಾನೀಯಗಳತ್ತ ಮೊರೆ**

ಬಿಸಿಲ ಬೇಗೆಯಿಂದಾಗಿ ಸಾರ್ವಜನಿಕರು ತಂಪು ಪಾನೀಯಗಳತ್ತ ಮೊರೆ ಹೋಗಿದ್ದಾರೆ. ಎಳನೀರು, ಕಲ್ಲಂಗಡಿ, ಮಜ್ಜಿಗೆ, ಹಣ್ಣು ಪದಾರ್ಥಗಳ ಸೇವನೆಗೆ ಮುಂದಾಗಿದ್ದಾರೆ. ನಗರದ ಮುಖ್ಯ ರಸ್ತೆಗಳಲ್ಲಿ ಬೆಳಿಗ್ಗೆ ಯಿಂದಲೇ ರಸ್ತೆ ಬದಿ ಎಳನೀರು ಅಂಗಡಿಗಳ ಮುಂದೆ ಸಾರ್ವಜನಿಕರು ನಿಲ್ಲುವುದನ್ನು ಕಾಣಬಹುದು. ಹೋಟೆಲ್‌ಗಳಲ್ಲೂ ಸಹ ಮೊಸರನ್ನ, ಮಜ್ಜಿಗೆ ಪದಾರ್ಥಕ್ಕೆ ಬೇಡಿಕೆ ಹೆಚ್ಚಾಗಿದೆ.

### 32 ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆ

ಪ್ರಸಕ್ತ ಬೇಸಿಗೆ ಅವಧಿಯಲ್ಲಿ ಜಿಲ್ಲೆಯ 32 ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಉಲ್ಬಣಗೊಂಡಿದ್ದು, ಖಾಸಗಿ ಬೋರವೆಲ್ ಮೂಲಕ ನೀರು ಪೂರೈಸಲಾಗುತ್ತಿದೆ. ಆಲೂರು ತಾಲ್ಲೂಕಿನ 4, ಅರಕಲಗೂಡು 4, ಬೇಲೂರು 9, ಚನ್ನರಾಯಪಟ್ಟಣ 4 ಹಾಗು ಹಾಸನದ 11 ಗ್ರಾಮಗಳಲ್ಲಿ ನೀರಿನ ಬವಣೆ ಕಾಣಿಸಿಕೊಂಡಿದೆ. ಹಾಸನದ ಶಂಕರನಹಳ್ಳಿಯಲ್ಲಿ ಮಾತ್ರ ರೈತರೊಬ್ಬರು ಉಚಿತವಾಗಿ ನೀರು ಕೊಡುತ್ತಿದ್ದಾರೆ. ಉಳಿದ ಕಡೆಗೆ ಗ್ರಾಮ ಪಂಚಾಯಿತಿ ವತಿಯಿಂದ ಹಣ ಭರಿಸಲಾಗುತ್ತಿದೆ.

# ಮಹಿಳಾ ಮೀಸಲಾತಿಗಾಗಿ ಕಾಂಗ್ರೆಸ್ ಸಹಿ ಸಂಗ್ರಹ

• ಪ್ರಜೋದಯ ವರದಿ

**ಬೇಲೂರು:** ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಆಗ್ರಹಿಸಿ ಪಟ್ಟಣದಲ್ಲಿ ಕಾಂಗ್ರೆಸ್ ಮಹಿಳಾ ಘಟಕದಿಂದ ಸಹಿ ಸಂಗ್ರಹ ಅಭಿಯಾನ ನಡೆಯಿತು.

ಪುರಸಭೆ ಮಾಜಿ ಅಧ್ಯಕ್ಷೆ ತೀರ್ಥಕುಮಾರಿ ವೆಂಕಟೇಶ್ ಅವರು ಮಾತನಾಡಿ, ಮಹಿಳಾ ಮೀಸಲಾತಿ ಸಂಬಂಧ ಲೋಕಸಭೆಯಲ್ಲಿ ನಡೆದ ಬೆಳವಣಿಗೆಗಳನ್ನು ಎಲ್ಲರೂ ಗಮನಿಸಿದ್ದೇವೆ. ಮಹಿಳಾ ಮೀಸಲಾತಿ ಹಾಗು ಕ್ಷೇತ್ರ ಪುನರ್ ವಿಂಗಡಣೆ ಮಸೂದೆಯನ್ನು ಒಟ್ಟಿಗೆ ಅಂಗೀಕಾರಕ್ಕೆ ತಂದಿದ್ದರಿಂದ ಕಾಂಗ್ರೆಸ್ ಹಾಗು ಮಿತ್ರ ಪಕ್ಷಗಳು ವಿರೋಧಿಸಿದವು. ಎನ್‌ಡಿಎ ಸರ್ಕಾರಕ್ಕೆ ಮಹಿಳೆಯರ ಮೇಲೆ



ಕಾಳಜಿ ಇದ್ದಿದ್ದರೆ ಅದಕ್ಕೆ ಮಾತ್ರ ಪ್ರಾಶಸ್ತ್ಯ ನೀಡಬೇಕಿತ್ತು ಎಂದರು.

2013ರಲ್ಲಿ ಡಾ. ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ ಮಹಿಳಾ ಮೀಸಲಾತಿ ಮಸೂದೆಗೆ ರಾಜ್ಯಸಭೆಯಲ್ಲಿ ಅಂಗೀಕಾರ ಪಡೆದಿತ್ತು. ಆದರೆ ವಿರೋಧ ಪಕ್ಷದಲ್ಲಿದ್ದ ಎನ್‌ಡಿಎ ವಿರೋಧ ಮಾಡಿದ್ದರಿಂದ ಲೋಕಸಭೆಯಲ್ಲಿ ಮಸೂದೆ ಅಂಗೀಕಾರ ಆಗಲಿಲ್ಲ. ಈಗ ಆಡಳಿತದಲ್ಲಿರುವ ಎನ್‌ಡಿಎ ದೇಶದ ಮಹಿಳೆಯರಿಗೆ ಘೋರ ಅನ್ಯಾಯ ಮಾಡಿದೆ ಎಂದರು.

» ನಾಲ್ಕನೇ ಪುಟದಲ್ಲಿ

## 5 ಲಕ್ಷ ರೂ. ಮೌಲ್ಯದ ಡ್ರಗ್ಸ್ ವಶ: ಇಬ್ಬರ ಬಂಧನ

• ಪ್ರಜೋದಯ ವರದಿ

**ಹಾಸನ:** ಅಕ್ರಮವಾಗಿ ಎಂಡಿಎಂಎ ಡ್ರಗ್ಸ್ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರನ್ನು ಬಂಧಿಸಿರುವ ಬಡಾವಣೆ ಠಾಣೆ ಪೊಲೀಸರು 5 ಲಕ್ಷ ರೂ. ಮೌಲ್ಯದ ಸುಮಾರು 50 ಗ್ರಾಂ ಮಾದಕ ಪದಾರ್ಥ ವಶಪಡಿಸಿಕೊಂಡಿದ್ದಾರೆ.

ನಗರದ ಬೂವನಹಳ್ಳಿ ವಿಮಾನ ನಿಲ್ದಾಣದ ಬಳಿ ಡ್ರಗ್ಸ್ ಮಾರಾಟಕ್ಕೆ ಪ್ರಯತ್ನ ನಡೆದಿತ್ತು ಎನ್ನಲಾಗಿದೆ. ಬೇಲೂರಿನ ರಾಜಕಾರಣಿಯೊಬ್ಬರ ಸಂಬಂಧಿಕರ ಪುತ್ರ ಹಾಗು ಫಸ್ಲು ಅಹಮದ್ ಬಂಧಿತರು. ಬೇಲೂರಿನಿಂದ ಕಾರಿನಲ್ಲಿ ಡ್ರಗ್ಸ್ ತೆಗೆದುಕೊಂಡು ಬಂದಿದ್ದರು. ಅಮಲು ಪದಾರ್ಥದೊಂದಿಗೆ ಗಿರಾಕಿಗಳಿಗಾಗಿ ಕಾಯುತ್ತಾ ಕಾರಿನಲ್ಲಿ ಕುಳಿತಿದ್ದಾಗಲೇ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಇಬ್ಬರನ್ನು ಮಾಲು ಸಮೇತ ವಶಕ್ಕೆ ಪಡೆದಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸತ್ಯಮಂಗಲ ಕೆರೆ ಉದ್ಯಾನದಲ್ಲಿ ಮಹಿಳಾ ದಿನಾಚರಣೆ

• ಪ್ರಜೋದಯ ವರದಿ

**ಹಾಸನ:** ನಗರದ ಸತ್ಯಮಂಗಲ ಕೆರೆ ಉದ್ಯಾನದಲ್ಲಿ ಸುಗ್ಗಿ ಯೋಗ ಕೇಂದ್ರ, ಸತ್ಯಮಂಗಲ ಕೆರೆ ಅಭಿವೃದ್ಧಿ ಸಮಿತಿ ಹಾಗು ಪತಂಜಲಿ ಯೋಗ ಪರಿವಾರ ವತಿಯಿಂದ ಆಯೋಜಿಸಿದ್ದ ಮಹಿಳಾ ದಿನಾಚರಣೆ ಮತ್ತು ಸುಗ್ಗಿ ಯೋಗ ಕೇಂದ್ರದ ವಾರ್ಷಿಕೋತ್ಸವದಲ್ಲಿ ಶಾಸಕ ಹೆಚ್.ಪಿ.ಸ್ವರೂಪ್ ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ ಅವರು, ಸುಗ್ಗಿ ಯೋಗ ಕೇಂದ್ರ ಹಾಗು ಪತಂಜಲಿ ಯೋಗ ಪರಿವಾರ ಮನುಷ್ಯನ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಹತ್ತು ಹಲವು ಕಾರ್ಯಕ್ರಮಗಳ




ಆಯೋಜಿಸಿದೆ. ಸತ್ಯಮಂಗಲ ಕೆರೆ ಅಭಿವೃದ್ಧಿ ಸಮಿತಿಯು ಕೆರೆಯನ್ನು ಸಂರಕ್ಷಿಸಿ ಅದನ್ನು ಉಳಿಸುವ ಕೆಲಸ ಮಾಡುತ್ತಿದೆ. ಈ ರೀತಿಯ ಸ್ಥಳೀಯ ಕಾರ್ಯಕ್ರಮಗಳು ಸ್ಥಳೀಯ ಬಡಾವಣೆಗಳ ಸಮಸ್ಯೆಗಳನ್ನು ತಿಳಿದುಕೊಳ್ಳಲು ಅನುಕೂಲವಾಗಲಿವೆ. ಶಾಸಕನಾಗಿ ಬಡಾವಣೆಯ ಸಮಸ್ಯೆಗಳನ್ನು ಸಮಾನವಾಗಿ ಪರಿ ಹರಿಸಲು ಶ್ರಮ ವಹಿಸುತ್ತೇನೆಂದರು.

## ಮೇ 1ರಿಂದ 6ರವರೆಗೆ ಶಿವಲಿಂಗ ಸ್ವಾಮೀಜಿ ಸ್ಮರಣೋತ್ಸವ

• ಪ್ರಜೋದಯ ವರದಿ

**ಅರಸೀಕೆರೆ :** ಮಾಡಾಳು ಗ್ರಾಮದ ಶ್ರೀ ಸ್ವರ್ಣ ಗೌರಮ್ಮ ದೇವಾಲಯದಲ್ಲಿ ಮೇ 1 ರಿಂದ 6ರವರೆಗೆ



ಹಾರನಹಳ್ಳಿ ಕೋಡಿ ಮಠದ ಮಹಾ ತಪಸ್ವಿ ಶ್ರೀ ಶಿವಲಿಂಗ ಸ್ವಾಮೀಜಿ ಅವರ 139ನೇ ಪುಣ್ಯ ಸಂಸ್ಮರಣೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಗೌರಮ್ಮ ದೇವಿ ಸೇವಾ ಸಮಿತಿ ಅಧ್ಯಕ್ಷ ಎಂ.ಎಸ್. ನಟರಾಜ್ ಅವರು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋಡಿಮಠದ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಮಹಾ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ. ಶ್ರೀ ಶಿವಲಿಂಗ ಸ್ವಾಮೀಜಿ ಸ್ಮರಣಾರ್ಥ ಕರ್ನಾಟಕ ಕಲಾಶ್ರೀ ಕಲ್ಲಿನಾಥ ಶಾಸ್ತ್ರಿ ಅವರು 5 ದಿನ ಕಾಲ ಪುರಾಣ ಪ್ರವಚನ ನಡೆಸಿಕೊಡಲಿದ್ದಾರೆಂದರು. ಧಾರ್ಮಿಕ ಕಾರ್ಯ ಕ್ರಮವು ಪ್ರತಿದಿನ ಸಂಜೆ 7 ಗಂಟೆಗೆ ನಡೆಯಲಿದ್ದು, ರಾಂಪುರ ನಿರ್ವಾಣ ಸಿದ್ದೇಶ್ವರ ಸ್ವಾಮಿ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪ್ರತಿದಿನ ಭಕ್ತರಿಗೆ ದಾಸೋಹ ವ್ಯವಸ್ಥೆ ಮಾಡಲಾಗಿದೆ. ಮುಖಂಡರಾದ ಹೆಚ್.ಸಿ. ಮಹದೇವಪ್ಪ, ಮಾಡಾಳು ಶಿವಲಿಂಗಪ್ಪ ಹಾಜರಿದ್ದರು.

## ತಣ್ಣೀರುಹಳ್ಳ ಮಠದಲ್ಲಿ ಬಸವ ಜಯಂತಿ | ಸುತ್ತೂರು ಶ್ರೀ ಅಭಿಮತ

# ಋಷಿ ಮುನಿಗಳ ತ್ಯಾಗದಿಂದ ಪರಂಪರೆ ರಕ್ಷಣೆ

• ಪ್ರಜೋದಯ ವರದಿ

**ಹಾಸನ:** ಭಾರತವು ವೈಚಾರಿಕ, ಸಾಂಸ್ಕೃತಿಕವಾಗಿ ಸಂಪದ್ಭರಿತ ರಾಷ್ಟ್ರವಾಗಿ ಸಾವಿರಾರು ವರ್ಷಗಳಿಂದ ತನ್ನ ಹಿರಿಮೆಯನ್ನು ಉಳಿಸಿಕೊಂಡು ಬಂದಿದೆ ಎಂದರೆ ಅದಕ್ಕೆ ಋಷಿ ಮುನಿಗಳ ತ್ಯಾಗ ಕಾರಣವೆಂದು ಸುತ್ತೂರು ಮಠದ ಪೀಠಾಧ್ಯಕ್ಷ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ನಗರದ ತಣ್ಣೀರುಹಳ್ಳ ಮಠದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿಶ್ವಗುರು ಬಸವೇಶ್ವರರ 896ನೇ ಜಯಂತ್ಯೋತ್ಸವ, ನಡೆದಾಡುವ ದೇವರು, ತ್ರಿವಿಧ ದಾಸೋಹಿ ಡಾ. ಶಿವಕುಮಾರ ಸ್ವಾಮೀಜಿ ಅವರ 119ನೇ ಜಯಂತ್ಯೋತ್ಸವ, ಶ್ರೀ ಶಿವಲಿಂಗ ಸ್ವಾಮೀಜಿ ಅವರ 92ನೇ ಜಯಂತಿ, ಶ್ರೀ ವಿಜಯಕುಮಾರ ಸ್ವಾಮೀಜಿ ಅವರ 56ನೇ ಮಾಸದ ಕಾರ್ಯಕ್ರಮ ಹಾಗೂ ಶ್ರೀ ಶಿವಲಿಂಗ ಸ್ವಾಮೀಜಿ ದಾಸೋಹ ಭವನ ಮತ್ತು



ಗುರು ಭವನ ಉದ್ಘಾಟನಾ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಋಷಿ ಮುನಿಗಳು ವೈಯಕ್ತಿಕ ಬದುಕನ್ನು ಬದಿಗೊತ್ತಿ ದೇಶಕ್ಕೆ ಭವ್ಯ ಪರಂಪರೆ ಕಟ್ಟಿಕೊಟ್ಟಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗುವ ಮೂಲಕ ಜೀವನವನ್ನು ಸಾರ್ಥಕ ಮಾಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ. ಎಲ್ಲಿಯವರೆಗೆ ದೇಶದಲ್ಲಿ ಸಾಧು, ಸಂತರು ಇರುತ್ತಾರೋ ಅಲ್ಲಿಯ ತನಕ ರಾಷ್ಟ್ರಕ್ಕೆ ಯಾವ ಅಪಾಯ ವಿಲ್ಲವೆಂಬುದು ಅಷ್ಟೇ ಸತ್ಯ ಎಂದರು.

ವಚನ ಸಾಹಿತ್ಯದ ಮೂಲಕ ವಿಶ್ವಗುರು ಬಸವಣ್ಣ ಅವರು ಮಾನವ ಕುಲಕ್ಕೆ ಬದುಕಿನ ದಾರಿ ಹೇಳಿಕೊಟ್ಟಿದ್ದಾರೆ. 12ನೇ ಶತಮಾನದ ಶರಣರ ಅವಧಿಯನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಾಗಿದೆ. ಅದೇ ರೀತಿ ಶಿವಕುಮಾರ ಸ್ವಾಮೀಜಿ ಅವರು ಸಮಾಜಕ್ಕೆ ಬೆಳಕಾಗಿದ್ದಾರೆಂದರು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಮಾತನಾಡಿ, ಮನೆ ಬೆಳಗಲು ಜ್ಯೋತಿ ಹೇಗೆ ಕೆಲಸ ಮಾಡುತ್ತದೆಯೋ ಮನುಷ್ಯನನ್ನು ಸರಿಯಾದ ದಾರಿಯಲ್ಲಿ ನಡೆಸಲು ಗುರು ಬೇಕಾಗುತ್ತಾರೆ. ನಮ್ಮ ಸಮಾಜದಲ್ಲಿ ಧಾರ್ಮಿಕ ಸಂಪ್ರದಾಯಗಳಿಗೆ ವಿಶೇಷ ಸ್ಥಾನ ನೀಡಲಾಗಿದೆ. ತುಮಕೂರಿನ ಶಿವಕುಮಾರ ಸ್ವಾಮೀಜಿ ಅವರು ತ್ರಿವಿಧ ದಾಸೋಹದ ಮೂಲಕ ನಾಡಿಗೆ ಶ್ರೇಷ್ಠ ಕೊಡುಗೆ ನೀಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ನಾವೆಲ್ಲರೂ ಸಾಗುವ ಮೂಲಕ ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡಬೇಕಿದೆ ಎಂದರು.

ತಣ್ಣೀರುಹಳ್ಳ ಮಠದ ವಿಜಯಕುಮಾರ ಸ್ವಾಮೀಜಿ ಮಾತನಾಡಿ, ದಾಸೋಹ ಭವನ, ಗುರು ಭವನ ನಿರ್ಮಾಣದಲ್ಲಿ ಭಕ್ತರ ಸಹಕಾರ ಹೆಚ್ಚಿದೆ. 2021ರಲ್ಲಿ ಮಠದ ಜವಾಬ್ದಾರಿ ವಹಿಸಿಕೊಂಡ ನಾನು ಪ್ರತಿ ಭಕ್ತರ ಮನೆಗೆ ಭೇಟಿ ನೀಡಿದ್ದೇನೆ. ಎಲ್ಲಾ ಹಣಕಾಸಿನ ವ್ಯವಹಾರದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲಾಗಿದೆ ಎಂದರು.

» ನಾಲ್ಕನೇ ಪುಟದಲ್ಲಿ

## ಏ.30ರಂದು ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಜಯಂತ್ಯೋತ್ಸವ

• ಪ್ರಜೋದಯ ವರದಿ

**ಹೊಳೆನರಸೀಪುರ:** ಪಟ್ಟಣದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದಲ್ಲಿ ಶ್ರೀ ಸ್ವಾಮಿಯ ಜಯಂತ್ಯೋತ್ಸವ ಅಂಗವಾಗಿ ಏ. 30ರ ಗುರುವಾರ ವಿಶೇಷ ಪೂಜೆ ಏರ್ಪಡಿಸಲಾಗಿದೆ.

ಅಂದು ಮುಂಜಾನೆ ಸುಪ್ರಭಾತ ಸೇವೆ ನಡೆಯಲಿದ್ದು, ಬಳಿಕ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ ನೆರವೇರಲಿದೆ. ನಂತರ ಶಂಕರ ಭಜನಾ ಮಂಡಳಿಯಿಂದ ನರಸಿಂಹ ಸಹಸ್ರನಾಮಾವಳಿ ಪಠಣ ಹಾಗು ಹೋಮದ ಸ್ವಾಹಾಕಾರದ ಮಂತ್ರ ಜಪ ನಡೆಯಲಿದೆ. ಬಳಿಕ ಕೋಟೆ ರಾಜಬೀದಿಗಳಲ್ಲಿ ದೇವರ ಉತ್ಸವ ಹಾಗು ಉತ್ತರಾಧಿ ಮಠದ ಆಭರಣ ಸೇವೆ ಜರುಗಲಿದೆ.

ಸಂಜೆ ಗೋಧೂಳಿ ಲಗ್ನದಲ್ಲಿ ಸೌಂದರ್ಯ ಲಹರಿ ಸಂಘದ ವತಿಯಿಂದ ವಿಷ್ಣು ಸಹಸ್ರನಾಮ ಹಾಗು ಲಕ್ಷ್ಮೀನರಸಿಂಹ ಕರಾವಲಂಬ ಸ್ತೋತ್ರ ಪಠಣ ಕಾರ್ಯಕ್ರಮ ನಡೆಯಲಿದೆ.


**ಅರಸೀಕೆರೆ**

ನಗರದ ಹಾಸನ ರಸ್ತೆಯ ವಿದ್ಯಾನಗರದ ಶ್ರೀಮಾರುತಿ ಸಚ್ಚಿದಾನಂದ ಆಶ್ರಮದ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ದೇವಾಲಯದಲ್ಲಿ 2ನೇ ವರ್ಷದ ಪ್ರತಿಷ್ಠಾವರ್ಧಂತಿ, ನೂತನ ಉತ್ಸವ ಮೂರ್ತಿ ಪ್ರತಿಷ್ಠಾಪನೆ, ಕಲ್ಯಾಣೋತ್ಸವ ಮತ್ತು ಬ್ರಹ್ಮ ರಥೋತ್ಸವ ಕಾರ್ಯಕ್ರಮ ಏ.29ರಿಂದ ಮೇ 3ರವರೆಗೆ ನಡೆಯಲಿದೆ.

ಮೇ 1 ರಂದು ಬೆಳಿಗ್ಗೆ 108 ಬ್ರಹ್ಮಕಲಶ ಸ್ಥಾಪನೆ, ಹಲವು ಹೋಮ, 11.30ಕ್ಕೆ ಬ್ರಹ್ಮ ರಥೋತ್ಸವ ನಡೆಯಲಿದೆ. ಮೇ 3 ರಂದು ಸಂಪ್ರೋಕ್ಷಣೆ ಮಹಾಪೂಜೆ ನಡೆಯಲಿದೆ.

# ಭಾವ ಲಹರಿ

# ಕಾಡಿನಲ್ಲಿ ಬೆಳೆಯುವ ದ್ರಾಕ್ಷಿ ಹಣ್ಣುಗಳು!



» ಕಾಡಿನ ಅಂಚಿನಲ್ಲಿ, ಖಾಸಗಿ ದರಕಾಸ್ತಿಗೆ ಹಾಕಿದ ಬೇಲಿಗೆ ಹೊಂದಿಕೊಂಡಂತೆ ಇದ್ದ ಆ ಮರ ತೀರ ಎತ್ತರವಾಗಿಲ್ಲ; ಕೈಗೆಟಕುವಷ್ಟು ಎತ್ತರದಲ್ಲೇ ರೆಂಬೆಕೊಂಬೆಗಳ ಟಿಸಿಲು. ಫೆಬ್ರವರಿ-ಮಾರ್ಚ್‌ನಲ್ಲಿ ಅದರಲ್ಲಿ ದಂಡಿಯಾಗಿ ಬಣ್ಣ-ಬಣ್ಣದ ಚೇಂಪಿ ಹಣ್ಣುಗಳ ರಾಶಿ. ಸಂಜೆ ಹೈಸ್ಕೂಲಿನಿಂದ ವಾಪಸಾಗುವಾಗ, ಆ ಮರಕ್ಕೆ ಒಂದು ಭೇಟಿ ನೀಡಿ, ಆರೆಂಟು ಚೇಂಪಿ ಹಣ್ಣುಗಳನ್ನು ಬಾಯಿಗೆ ಹಾಕಿಕೊಂಡು ನಡೆಯುತ್ತಾ ಮನೆಯತ್ತ ಸಾಗುವ ಕ್ರಮ.

ಈಗ ಬೆಂಗಳೂರಿನಲ್ಲಿರುವ, ಮೂಲತಃ ನಮ್ಮ ಹಳ್ಳಿಯವರಾದ ಅವರು ಹತಾಶೆಯಿಂದ ಹೇಳುತ್ತಿದ್ದರು: ಹ್ವಾಯ್, ನಾವೆಲ್ಲಾ ಶಾಲೆಗೆ ಹೋಗುವಾಗ ಚೇಂಪಿ ಹಣ್ಣು ಅಂತ ಒಂದು ಹಣ್ಣನ್ನು ತಿಂತಿದ್ದೆವು; ಕಳೆದ ತಿಂಗಳು ಊರಿಗೆ ಹೋಗಿ ನೋಡಿದರೆ, ನಮ್ಮ ಹಕ್ಕಲಿನಲ್ಲಿದ್ದ ಆ ಮರವನ್ನೇ ಕಡಿದುಹಾಕಿದ್ದಾರೆ, ಅಲ್ಲೆಲ್ಲಾ ಬಾಳೆ ತೋಟ ಮಾಡಿದ್ದಾರೆ.

ಚೇಂಪಿ ಹಣ್ಣನ್ನು, ಅದೇ ರೀತಿ ಮುರಿನ ಹಣ್ಣು, ಬೆಳಮಾರು ಹಣ್ಣು ಇವೆಲ್ಲಾ ಹಣ್ಣುಗಳ ರುಚಿಯನ್ನು ಈಗಿನ ಮಕ್ಕಳು ನೋಡುವುದೇ ಬೇಡವೇ? ಇಂತಹ ಉದ್ಗಾರಗಳನ್ನು ನೀವೂ ಸಹ ಕೇಳಿಯೇ ಇರುತ್ತೀರಿ!

ನಮ್ಮ ಬಾಲ್ಯಕಾಲದಲ್ಲಿ ಕಂಡ, ಕೇಳಿದ ಅವೆಷ್ಟೋ ಸಂಗತಿಗಳು, ರುಚಿಗಳು, ಒಳ್ಳೊಳ್ಳೆಯ ವಿಚಾರಗಳು ಈಗ ಕಣ್ಮರೆಯಾಗಿವೆ, ಕಣ್ಮರೆಯಾಗುವ ಹಂತದಲ್ಲಿವೆ; ಇದಕ್ಕೆ ಕಾರಣಗಳನ್ನು ಹುಡುಕಿದರೆ ಸಿಗಬಹುದು ಸಾವಿರಾರು. ಸಮ್ಮರೈಸ್ ಮಾಡಿ, ಒಂದೇ ಮಾತಿನ ವಿಶ್ಲೇಷಣೆ ನೀಡುವುದಾದರೆ, ಕಾಲ ಬದಲಾಗಿದೆ! ನಮ್ಮ ಹಳ್ಳಿಯಲ್ಲಿರುವ ಚೇಂಪಿ ಹಣ್ಣಿನ ವಿಚಾರವನ್ನು ಯಾರಾದರೂ ಪ್ರಸ್ತಾಪ ಮಾಡಿದರೆ, ನನ್ನ ಬಾಯಲ್ಲಿ ನೀರು ಬರುವುದಂತೂ ನಿಜ!

ಏಕೆಂದರೆ, ದ್ರಾಕ್ಷಿಯನ್ನು ಹೋಲುವ ಹಳ್ಳಿಗಾಡಿನ ಹಣ್ಣುಗಳಲ್ಲಿ ಚೇಂಪಿಗೆ ಅಗ್ರಸ್ಥಾನ ನೀಡಬೇಕು. ಈ ಹಣ್ಣಿನ ಗಾತ್ರವೂ ದ್ರಾಕ್ಷಿಯಂತೆಯೇ, ಬಣ್ಣದಲ್ಲಿ ದ್ರಾಕ್ಷಿಗಿಂತಲೂ ಒಂದು ಕೈ ಮಿಗಿಲು, ರುಚಿಯಲ್ಲೂ ದ್ರಾಕ್ಷಿಯನ್ನು ಹೋಲುತ್ತದೆ! (ಇದನ್ನು ಚಾಂಪಿ, ಚೇಂಪಿ, ಕಲ್ಲು ಸಂಪಿಗೆ ಹಣ್ಣು ಎಂಬ ಹೆಸರಿನಿಂದಲೂ ಕರೆಯುವುದುಂಟು.

ವೈಜ್ಞಾನಿಕ ಹೆಸರು-ಕಾರ್ಷಿಯಾ ಮೊಂಟಾನಾ). ಪ್ರತಿ ಬೇಸಗೆಯ ಸಮಯದಲ್ಲಿ ಹಣ್ಣಾಗುವ ಈ ಹಣ್ಣನ್ನು ತಿನ್ನುವುದೆಂದರೆ ನಮಗೆಲ್ಲಾ ಬಹಳ ಖುಷಿ. ಮಧ್ಯಮ ಗಾತ್ರದ ಈ ಮರದ ತುಂಬಾ ಅರ್ಧ ಇಂಚು ಉದ್ದನೆಯ ಮುಳ್ಳುಗಳು; ದೊಡ್ಡ ದೊಡ್ಡ ಎಲೆಗಳು; ಅವುಗಳ ಮರೆಯಲ್ಲಿರುವ ಕೆಂಪನೆಯ ಹಣ್ಣುಗಳ ರುಚಿ, ಅಪ್ರತಿಮ. ನಮ್ಮೂರಲ್ಲಿ ಒಂದು ಹಂಚಿನ ಕಾರ್ಖಾನೆ ಇತ್ತು; ಅದರ ಹೊರ ಅಂಚಿನಲ್ಲಿನ ಬೇಲಿಯುದ್ದಕ್ಕೂ ಬೆಳೆದಿದ್ದ ಕುರುಚಲು ಗಿಡಗಳ ಸಾಲಿನ ನಡುವೆ ಒಂದು ಚೇಂಪಿ ಮರ ಇತ್ತು; ಬಿಸಿಲುಗಾಲದಲ್ಲಿ ಅದರಲ್ಲಿ ಹಣ್ಣು ಬಿಟ್ಟಾಗ, ಮಕ್ಕಳಿಗೆಲ್ಲಾ ಖುಷಿ; ಆತ್ಮೀಯ ಗೆಳೆಯರಿಗೆ ಮಾತ್ರ ಹೇಳಿ, ತುಸು ರಹಸ್ಯವಾಗಿ ಆ ಗಿಡದ ಬಳಿ ಹೋಗಿ, ಹಣ್ಣುಗಳನ್ನು ಆಯ್ದು ತಿನ್ನುವ ಕೆಲಸ.

ಎಲ್ಲರಿಗೂ ಹೇಳಿ, ಎಲ್ಲ ಮಕ್ಕಳೂ ಒಮ್ಮೆಗೇ ದಾಂಗುಡಿ ಇಟ್ಟರೆ, ತಮಗೆ ತಿನ್ನಲು ಹೆಚ್ಚು ಹಣ್ಣು ಸಿಗದಲ್ಲಾ ಎಂಬ ತರ್ಕದಿಂದ, ಚೇಂಪಿ ಮರದಲ್ಲಿ ಹಣ್ಣಾದಾಗ ರಹಸ್ಯ ಕಾಪಾಡುವ ಒಂದು ಪದ್ಧತಿ. ಆದರೆ, ತನ್ನಷ್ಟಕ್ಕೇ ಬೆಳೆದ ಕಾಡು ಮರವೊಂದು ದ್ರಾಕ್ಷಿಯ ಸ್ವರೂಪದ, ಅಷ್ಟು ರುಚಿಕರ ಹಣ್ಣುಗಳು ಬಿಟ್ಟಾಗ, ಅದರ ಸುದ್ದಿ ಜಗಜ್ಜಾಹೀರಾಗದೇ ಇರುತ್ತದಾ? ಇನ್ನೊಂದು ಚೇಂಪಿ ಮರ ಹೈಸ್ಕೂಲಿಗೆ ಹೋಗುವ ದಾರಿಯಲ್ಲಿ ಕಟ್ಟೆಮಕ್ಕಿ ಏರುರಸ್ತೆಯಿಂದ ತುಸು ಮುಂದೆ, ರಸ್ತೆಯಿಂದ ತುಸು ದೂರದಲ್ಲಿತ್ತು.

ಕಾಡಿನ ಅಂಚಿನಲ್ಲಿ, ಖಾಸಗಿ ದರಕಾಸ್ತಿಗೆ ಹಾಕಿದ ಬೇಲಿಗೆ ಹೊಂದಿಕೊಂಡಂತೆ ಇದ್ದ ಆ ಮರ ತೀರ ಎತ್ತರವಾಗಿಲ್ಲ; ಕೈಗೆಟಕುವಷ್ಟು ಎತ್ತರದಲ್ಲೇ ರೆಂಬೆಕೊಂಬೆಗಳ ಟಿಸಿಲು. ಫೆಬ್ರವರಿ-ಮಾರ್ಚ್‌ನಲ್ಲಿ ಅದರಲ್ಲಿ ದಂಡಿಯಾಗಿ ಬಣ್ಣ-ಬಣ್ಣದ ಚೇಂಪಿ ಹಣ್ಣುಗಳ ರಾಶಿ. ಸಂಜೆ ಹೈಸ್ಕೂಲಿನಿಂದ ವಾಪಸಾಗುವಾಗ, ಆ ಮರಕ್ಕೆ ಒಂದು ಭೇಟಿ ನೀಡಿ, ಆರೆಂಟು ಚೇಂಪಿ ಹಣ್ಣುಗಳನ್ನು ಬಾಯಿಗೆ ಹಾಕಿಕೊಂಡು ನಡೆಯುತ್ತಾ ಮನೆಯತ್ತ ಸಾಗುವ ಕ್ರಮ.

ನಾವು ಮಕ್ಕಳು ಆ ಮರದಲ್ಲಿದ್ದ ಕೆಂಪನೆಯ ಹಣ್ಣುಗಳನ್ನು ಕೊಯ್ಯುವುದನ್ನು ನೋಡಿದರೂ, ಅಲ್ಲೇ ತುಸು ದೂರದಲ್ಲಿರುವ ಮನೆಯವರು ತಕರಾರು ಮಾಡುತ್ತಿರಲಿಲ್ಲ, ಬದಲಾಗಿ, ಶಾಲೆ ಮಕ್ಕಳು ತಾನೆ, ತಿನ್ನಲಿ ಬಿಡಿ ಎಂಬ ಉದಾರತೆ ತೋರುತ್ತಿದ್ದರು. ಈಗಿನ ಮಕ್ಕಳಿಗೆ ಈ ರೀತಿ ಕಾಡುಮರವೊಂದರಿಂದ ಹಣ್ಣು ಕೀಳುವ ಅವಕಾಶ ಕಡಿಮೆ; ಏಕೆಂದರೆ, ಅಂದಿನಂತೆ ಇಂದು ಶಾಲಾಮಕ್ಕಳು ನಾಲ್ಕಾರು ಕಿ.ಮೀ. ನಡೆದು ಹೋಗುವುದುಂಟೇ? ನಮ್ಮ ರೀತಿ, ಬೆಳಗ್ಗೆ ಹಾಡಿ ಗುಡ್ಡಗಳ ಮಧ್ಯೆ ಕನಿಷ್ಠ ಮೂರು ಕಿ.ಮೀ., ಸಂಜೆ ಅದೇ ಪ್ರಕೃತಿಯ ನಡುವೆ ಅಷ್ಟೇ ದೂರ ನಡೆದು ಬರುತ್ತಿದ್ದ ನಮಗೆ ಮಾತ್ರ ಇಂತಹ ಅದೃಷ್ಟ!

ಇಂದಿನ ಮಕ್ಕಳು ಮನೆ ಮುಂದೆ ಶಾಲಾ ವಾಹನವನ್ನೇರಿ ಅಥವಾ ಪೋಷಕರ ಸ್ಕೂಟರಿನಲ್ಲಿ ಕುಳಿತು ಶಾಲೆಗೆ ಹೋಗಿ ಬರುವವರಾಗಿದ್ದರಿಂದ, ಪರಿಸರದ ಇಂತಹ ಸಿಹಿ-ಸಿಹಿ ವ್ಯಾಪಾರಗಳನ್ನು ನೋಡಿ ಅನುಭವಿಸುವ ಅದೃಷ್ಟದಿಂದ ವಂಚಿತರಾಗಿದ್ದಾರೆಂದೇ ಹೇಳಬಹುದು.

ನಾವೆಲ್ಲಾ ಗಂಟೆಗಟ್ಟಲೆ ಶಾಲೆ ನಡೆದು ಸಾಗುವವರಾಗಿದ್ದರಿಂದ, ಅಂದು ಗಳಿಸುತ್ತಿದ್ದ ಅಂಕಗಳು ಕಡಿಮೆ! ಇಂದು ವಾಹನದಲ್ಲಿ ವೇಗವಾಗಿ ಸಾಗುವ ಮಕ್ಕಳು ಅಧಿಕ ಅಂಕಗಳನ್ನು ಗಳಿಸಿ, ಸ್ಪರ್ಧಾತ್ಮಕ ಬದುಕಿನಲ್ಲಿ ಬೇಗನೆ ಮುಂದೆ ಮುಂದೆ ಸಾಗುತ್ತಿದ್ದಾರೆ. ಅದೇ ಸಮಯದಲ್ಲಿ, ಪರಿಸರದ, ಪ್ರಕೃತಿಯ ಸಹಜ ಒಡನಾಡದಿಂದ ದೂರಾಗುತ್ತಿದ್ದಾರೆ. ಇದೂ ಸಹ ಬದಲಾದ ಕಾಲದ ಒಂದು ವಿದ್ಯಮಾನ ತಾನೆ!

ನಮ್ಮ ಹಳ್ಳಿಮನೆಯು ಮುಖ್ಯ ರಸ್ತೆಯಿಂದ ಮೂರು ಕಿ.ಮೀ., ದೂರವಿದ್ದುದರಿಂದ, ದ್ರಾಕ್ಷಿ, ಸೇಬು ಮೊದಲಾದ ಪೇಟೆಯ ಹಣ್ಣುಗಳನ್ನು ನೋಡುವ ಅವಕಾಶ ನಮಗೆಲ್ಲಾ ತುಸು ಕಡಿಮೆಯೇ. ಆದರೆ, ಕಪ್ಪುದ್ರಾಕ್ಷಿ ಹಣ್ಣನ್ನು ನಾವೆಲ್ಲಾ ಅಂಗಡಿಯಿಂದ ಕೊಂಡುತಂದು, ತಿನ್ನದಿದ್ದರೇನಂತೆ, ಅದನ್ನೇ ಶೇ.95ರಷ್ಟು ಹೋಲುವ ಗರ್ಚನ ಹಣ್ಣನ್ನು (ಕವಳೆ ಹಣ್ಣು) ಹೇರಳವಾಗಿ ತಿಂದಿದ್ದೇವೆ!

ನಮ್ಮ ಮನೆ ಎದುರಿನ ಗುಡ್ಡದಲ್ಲಿ ಗರ್ಚನ ಗಿಡಗಳು ಹೇರಳವಾಗಿ ಬೆಳೆದಿದ್ದವು. ಅವು ಪೊದೆ ಸ್ವರೂಪದ ಗಿಡಗಳು; ಹಾಗೆಯೇ ಹಲವು ವರ್ಷ ಬಿಟ್ಟರೆ ಮರವಾದರೂ ಆದೀತು. ಆದರೆ, ಗಿಡದ ಮೈ ತುಂಬಾ ದಪ್ಪ ದಪ್ಪನೆಯ ಮುಳ್ಳುಗಳು! ಆದ್ದರಿಂದ, ಮನೆಯ ಸುತ್ತಮುತ್ತ ಅದನ್ನು ಬೆಳೆಸುತ್ತಿರಲಿಲ್ಲ, ಅಕಸ್ಮಾತ್ ಕಂಡರೂ ಕತ್ತರಿಸಿ ಹಾಕುತ್ತಿದ್ದರು. ಆ ಗಿಡದ ಮೈಮೇಲೆ ಅಷ್ಟು ಮುಳ್ಳುಗಳೆಂದರೆ, ಅವನ್ನು ಬೆಳೆಸಿ ಮುಳ್ಳಿನ ಜೀವಂತ ಬೇಲಿಯನ್ನೂ ಮಾಡಬಹುದು. ತಿಳಿ ಹಸಿರು ಎಲೆ; ಮಲ್ಲಿಗೆ ಹೂವನ್ನು ಹೋಲುವ ಹೂವುಗಳು. ಆ ಹೂವನ್ನು ಕಿತ್ತು ತಿಂದರೆ, ಹುಳಿಯಾದ ರುಚಿ ಇದೆ!

ಮೈತುಂಬಾ ಮುಳ್ಳುಗಳಿರುವ ಗರ್ಚನ ಗಿಡಗಳಲ್ಲಿ ಕಾಯಿಯಾದ ತಕ್ಷಣ, ಹಳ್ಳಿಯವರ ಕಣ್ಣು ಆ ಗಿಡಗಳತ್ತ! ಆ ಹುಳಿಯಾದ ಕಾಯಿಯನ್ನು ಕಿತ್ತು ತಿನ್ನುವ ತವಕ ಮಕ್ಕಳಿಗಾದರೆ, ಬುಟ್ಟಿಗಳಲ್ಲಿ ಆ ಕಾಯಿಗಳನ್ನು ಕೊಯ್ದು, ಮನೆಗೆ ಕೊಂಡೊಯ್ದು ಅದರಿಂದ ಉಪ್ಪಿನಕಾಯಿ ತಯಾರಿಸುವ ಆಸೆ ಮಹಿಳೆಯರಿಗೆ. ಸಾಕಷ್ಟು ಹುಳಿ ಇರುವ ಇದರ ಉಪ್ಪಿನ ಕಾಯಿ ರುಚಿಕರ. ಇಷ್ಟೆಲ್ಲಾ ಚಟುವಟಿಕೆ ಆದ ನಂತರ, ಉಳಿದುಕೊಂಡಿರುವ ಕಾಯಿಗಳು, ದ್ರಾಕ್ಷಿ ಗಾತ್ರಕ್ಕೆ ಬಂದಾಗ, ದಟ್ಟ ನೇರಳೆ ಬಣ್ಣ ಪಡೆಯುತ್ತವೆ.

ಆ ಚಂದದ, ಮಿದುವಾದ ಹಣ್ಣನ್ನು ಕಿತ್ತು ತಿಂದರೆ, ದ್ರಾಕ್ಷಿಯದೇ ರುಚಿ; ತುಸು ಹುಳಿ ಜಾಸ್ತಿ. ಕಪ್ಪು ದ್ರಾಕ್ಷಿಯಲ್ಲಿರುವಂತೆ, ಇದರಲ್ಲೂ ಒಂದೆರಡು ಬೀಜಗಳು. ಪೊದೆ ಗಾತ್ರದ ಗಿಡಗಳಾಗಿದ್ದರಿಂದ, ಮಕ್ಕಳಿಗೆ ಕಿತ್ತು ತಿನ್ನಲು ತೊಂದರೆ ಇಲ್ಲ; ಹಸಿರು ಕೊಂಬೆಗಳಲ್ಲಿ, ಮುಳ್ಳುಗಳ ನಡುವೆ ಜೊಂಪೆ ಜೊಂಪೆಯಾಗಿರುವ ಗರ್ಚನ ಹಣ್ಣುಗಳನ್ನು ಕೊಯ್ದು ತಿನ್ನುವ ಅವಕಾಶ ದೊರೆತರೆ, ಆ ದಿನ ಮಕ್ಕಳ ಸಂತಸಕ್ಕೆ ಪಾರವೇ ಇಲ್ಲ!

ಜತೆಗೆ, ಗುಡ್ಡಗಾಡಿನಲ್ಲಿ ಬೆಳೆಯುವ ಈ ಹಣ್ಣಿನಲ್ಲಿ ಸಾಕಷ್ಟು ಔಷಧಿಯ ಗುಣಗಳಿರಲೇಬೇಕು, ಅದನ್ನು ತಿನ್ನುವ ಮಕ್ಕಳಿಗೂ ಅವು ದಕ್ಕಿರಲೇ ಬೇಕು. ಈ ಕಾಯಿಯನ್ನು ಕಿತ್ತಾಗ, ಬಿಳಿಯಾದ ರಸ ಒಸರುತ್ತದೆ! ಅದು ಈ ಗಿಡದ ವೈಶಿಷ್ಟ್ಯ. ನಮ್ಮ ಹಳ್ಳಿಯ ಮಹಿಳೆಯರು ಇದರ ಕಾಯಿಯಿಂದ ಉಪ್ಪಿನಕಾಯಿ ತಯಾರಿಸುತ್ತಿದ್ದರಾದರೂ, ವಾಣಿಜ್ಯಕವಾಗಿ ಅದನ್ನು ಬಳಸಿದಂತೆ ಕಾಣಿಸದು; ಆದರೆ, ನಮ್ಮ ರಾಜ್ಯದ ಬೇರೆ ಕೆಲವು ಕಡೆ, ಮಹಾರಾಷ್ಟ್ರ ಮೊದಲಾದ ಪ್ರದೇಶಗಳಲ್ಲಿ ಇದರ ಉಪ್ಪಿನ ಕಾಯಿಯನ್ನು ತಯಾರಿಸಿ ಮಾರುವುದುಂಟು; ಬೇರೆ ಉಪ್ಪಿನಕಾಯಿಯ ಜತೆ ಇದನ್ನು ಬೆರೆಸುವುದೂ ಉಂಟು.

ಗರ್ಚನ ಕಾಯಿ ಅಥವಾ ಕವಳೆ ಕಾಯಿಗೆ, ಬ್ರಿಟಿಷ್ ರಾಜ್‌ನಲ್ಲಿ ಐತಿಹಾಸಿಕ ಮಹತ್ವ ಇದೆ ಎಂದರೆ ಅಚ್ಚರಿಯಾದೀತು! ಜನಸಾಮಾನ್ಯರಿಗೆ ಅಗತ್ಯವಿರುವ ಉಪ್ಪಿನ ವಿತರಣೆಯನ್ನು ಬ್ರಿಟಿಷರು ನಿಯಂತ್ರಿಸಿ, ಅದರ ಮೇಲೆ ಭಾರೀ ಪ್ರಮಾಣದ ಸುಂಕ ಹೇರಿದ್ದರು; ಜನರು ಉಪ್ಪನ್ನು ಮತ್ತು ಇತರ ವಸ್ತುಗಳನ್ನು ಒಂದು ರಾಜ್ಯದಿಂದಲೋ, ಜಿಲ್ಲೆಯಿಂದಲೋ ಇನ್ನೊಂದು ಪ್ರದೇಶಕ್ಕೆ ಸುಲಭವಾಗಿ ಸಾಗಿಸದೇ ಇರುವಂತೆ ನೋಡಿಕೊಳ್ಳಲು, ಗಸ್ತು ತಿರುಗುವುದರ ಜತೆಯಲ್ಲೇ, ಅವರು ಸುಮಾರು 2500 ಮೈಲು ಉದ್ದದ ಮುಳ್ಳಿನ ಗಿಡಗಳ ಬೇಲಿಯನ್ನು ನಿರ್ಮಿಸಿದ್ದರು; ದಪ್ಪ ದಪ್ಪ ಮುಳ್ಳುಗಳಿರುವ ಗಿಡಗಳನ್ನು ಬೆಳೆಸಿ, ಅದಕ್ಕೆ ನೀರೆರೆದು, ಜೀವಂತ ಮುಳ್ಳು ಬೇಲಿಯನ್ನು ನಿರ್ಮಿಸಿ, ಬಡವರಿಗೆ ಬೇಕಾದ ಉಪ್ಪನ್ನು ದುಲರ್ಭ ಮಾಡಿದ ಕುಖ್ಯಾತಿ ಬ್ರಿಟಿಷರಿಗಿದೆ.

ಅಂತಹ ಜೀವಂತ ಮುಳ್ಳು ಬೇಲಿಯನ್ನು ಬೆಳೆಸಲು, ಕಳ್ಳಿ ಮತ್ತು ಇತರ ಮುಳ್ಳು ಗಿಡಗಳ ಜತೆ, ಪೊದೆಯ ರೀತಿ ಬೆಳೆಯುವ ಗರ್ಚನ (ಕ್ಯಾರಿಸ್ಸಾ ಕರಂಡಾಸ್) ಗಿಡಗಳನ್ನು ಉಪಯೋಗಿಸಿದ್ದರು! ಒಂದಿಂಚು ಉದ್ದದ ಗರ್ಚನ ಮುಳ್ಳುಗಳು, ದಪ್ಪ ಪೊದೆಯ ರೀತಿ ಬೆಳೆಯುವ ಆ ಗಿಡದ ಸ್ವರೂಪ ಎಲ್ಲವೂ ಆ ಜೀವಂತ ಬೇಲಿಯ ಜೀವಾಳವಾಗಿತ್ತು!

ತುಸು ಕ್ರೂರ ಎನ್ನಬಹುದಾದ ಜೀವಂತ ಮುಳ್ಳುಬೇಲಿಯನ್ನು ಸಾವಿರಾರು ಮೈಲು ದೂರ ಬೆಳೆಸುವ ಮೂಲಕ, ಈ ಹುಳಿ ಕಾಯಿಯ ಸಸ್ಯವನ್ನು ಭಾರತದಾದ್ಯಂತ ಪ್ರಚುರಪಡಿಸಿದ ಕುಖ್ಯಾತಿ ಬ್ರಿಟಿಷರಿಗೆ ಸಲ್ಲಲೇಬೇಕು!

ಅದೇನೇ ಇರಲಿ, ಇಂದಿನ ವಾಣಿಜ್ಯಕ ಪ್ರಪಂಚವನ್ನು ಗಮನಿಸಿದರೆ ಮತ್ತು ಕೃಷಿಕರು ವಾಣಿಜ್ಯ ಉದ್ದೇಶಕ್ಕೆ ಬಳಸಬಹುದಾದ ಗಿಡಗಳನ್ನು ಗಮನಿಸುವುದಾದರೆ, ಚೇಂಪಿ ಹಣ್ಣು ಮತ್ತು ಗರ್ಚನ ಹಣ್ಣು ಎರಡಕ್ಕೂ ಅಂತಹ ಅರ್ಹತೆ ಇದೆ. ನೋಡಲು ಮತ್ತು ರುಚಿಯಲ್ಲಿ ದ್ರಾಕ್ಷಿಯನ್ನು ಹೋಲುವ ಈ ಎರಡು ಹಣ್ಣುಗಳನ್ನು ಮಾರ್ಕೆಟಿಂಗ್ ಮಾಡುವ ಅವಕಾಶವಿದೆ. ಆ ಮೂಲಕ, ಗ್ರಾಮೀಣ ಜನರಿಗೆ ಪರ್ಯಾಯ ಆದಾಯ ಕಲ್ಪಿಸುವ ಅವಕಾಶವಿದೆ.

ಇಂತಹದ್ದೇ ಇನ್ನೊಂದು ಹಣ್ಣು ಇಲ್ಲಿ ನೆನಪಾಗುತ್ತದೆ; ಆದರೆ, ರುಚಿಯಲ್ಲಿ ಇದು ದ್ರಾಕ್ಷಿಯ ಹೋಲಿಕೆಗೆ ಬರಲಾರದು. ಆದರೆ, ನಮ್ಮ ಹಳ್ಳಿಯ ಗುಡ್ಡಗಳಲ್ಲಿ ಹೇರಳವಾಗಿ ಬೆಳೆಯುತ್ತಿದೆ. ಅದೇ ಕಾಡು ನೇರಳೆ ಹಣ್ಣು. ಕಡಲೆ ಬೀಜದಷ್ಟು ಗಾತ್ರದ, ದಟ್ಟ ನೇರಳೆ ಬಣ್ಣದ ಈ ಹಣ್ಣುಗಳನ್ನು ತಿಂದರೆ, ನಾಲಗೆಯೂ ನೇರಳೆ ಬಣ್ಣ ತಾಳುತ್ತದೆ.

ಇಂದು ಪೇಟೆಗಳಲ್ಲಿ ಜಾಮುನ್ ಹಣ್ಣು ಎಂದು ಪ್ರಸಿದ್ಧವಾಗಿರುವ ದೊಡ್ಡ ಗಾತ್ರದ ನೇರಳೆ ಹಣ್ಣುಗಳಿಗೂ, ಈ ಪುಟಾಣಿ ಕಾಡು ನೇರಳೆಗೂ ಹೋಲಿಕೆ ಇದೆ. ಇವೆರಡೂ ದೂರದ ಸಂಬಂಧಿಗಳು. ನಮ್ಮ ಮನೆಯ ಸುತ್ತಲೂ ಇರುವ ಗುಡ್ಡ, ಹಾಡಿ, ಹಕ್ಕಲುಗಳಲ್ಲಿ ನೂರಾರು ನೇರಳೆ ಮರಗಳಿವೆ; ಚಿಕ್ಕ ಗಾತ್ರದ ಈ ಕಾಡು ನೇರಳೆ ಮರಗಳಲ್ಲಿ, ಪ್ರತಿವರ್ಷ ಆಗುವ ಹಣ್ಣುಗಳನ್ನು ಲೆಕ್ಕ ಹಾಕಿದರೆ ಲಕ್ಷ ಮೀರಬಹುದು!

ಪುಟ್ಟ-ಪುಟ್ಟ ಹಣ್ಣುಗಳು, ಪ್ರತಿ ರೆಂಬೆಯಲ್ಲೂ ನೂರಾರು. ತುಸು ಸಿಹಿ, ತುಸುವಗರು ರುಚಿಯ ಈ ಹಣ್ಣುಗಳನ್ನು ಮಕ್ಕಳು ತಿನ್ನಬಹುದು; ಅಷ್ಟೇ ಹೊರತು, ದೊಡ್ಡವರ ಬಾಯಿಗೆ ರುಚಿ ಎನಿಸಲಾರದು. ಬೇಸಗೆ ಮುಗಿದು, ಮಳೆ ಗಾಲ ಬರುತ್ತದೆ ಎಂಬ ದಿನಗಳಲ್ಲಿ ಈ ಕಾಡು ನೇರಳೆಗಳು ಹೇರಳವಾಗಿ ಹಣ್ಣಾಗುತ್ತವೆ. ಎಷ್ಟರ ಮಟ್ಟಿಗೆ ಎಂದರೆ, ಮಕ್ಕಳು ಆರಿಸಿ ತಿಂದು, ಹಕ್ಕಿಗಳು, ಅಳಿಲುಗಳು ಆರಿಸಿ ತಿಂದು, ನಂತರವೂ ಉಳಿದ ಲಕ್ಷಗಟ್ಟಲೆ ಹಣ್ಣುಗಳು ಮರದ ಅಡಿ ಬಿದ್ದಿರುತ್ತವೆ.

ಔಷಧಿಯ ಗುಣವಿದೆ ಎಂದು ಬಹಳ ಪ್ರಚಾರ ಪಡೆದಿರುವ ದೊಡ್ಡ ಗಾತ್ರದ ನೇರಳೆ ಹಣ್ಣುಗಳು ಈಗ ಪೇಟೆಯಲ್ಲಿ ದುಬಾರಿ ಬೆಲೆಗೆ ಮಾರಾಟವಾಗುವುದನ್ನು ಕಂಡರೆ, ಈ ಕಾಡು ನೇರಳೆಯಲ್ಲೂ ಔಷಧಿಯ ಗುಣ ಇರಲೇಬೇಕು ಎನಿಸುತ್ತದೆ.

ನೇರಳೆ ಸಸ್ಯಗಳಲ್ಲಿ ಹಲವು ಪ್ರಭೇದಗಳಿವೆ, ತಳಿಗಳಿವೆ; ಎಲ್ಲ ನೇರಳೆಯ ಗುಣಗಳನ್ನು, ಔಷಧಿಯ ಗುಣಗಳನ್ನು ಸಂಶೋಧನೆಗೆ ಒಳಪಡಿಸಿ, ಅದರ ವಿವರಗಳನ್ನು ಕೃಷಿಕರಿಗೆ, ಜನಸಾಮಾನ್ಯರಿಗೆ ಒದಗಿಸಿದರೆ, ಅವುಗಳ ಬಹುಪಯೋಗ ಸಾಧ್ಯತೆಯನ್ನು ಗುರುತಿಸಲು ಸಾಧ್ಯ. ನಮ್ಮ ಹಳ್ಳಿಯ ಸುತ್ತ ಮುತ್ತ ದ್ರಾಕ್ಷಿಯನ್ನೇ ಹೋಲುವ

ಮೂರು ಹಣ್ಣುಗಳ ವಿವರಗಳನ್ನು ಕಂಡಾಗ, ನಾವು ಹಳ್ಳೀಯಲ್ಲಿದ್ದುಕೊಂಡು, ಸಾಕಷ್ಟು ವೈವಿಧ್ಯಮಯ ಹಣ್ಣುಗಳನ್ನು ಮೆಲ್ಲಿದ್ದೇವೆ ಎಂಬ ಖುಷಿ ಇದೆ.

ಪೇಟೆಯ ಹಣ್ಣುಗಳು ಹಳ್ಳಿಗಳಿಗೆ ಸರಬರಾಜು ಆಗದೇ ಇದ್ದಂತಹ ಕಾಲದಲ್ಲಿ ಬಾಲ್ಯವನ್ನು ಕಳೆದ ನಮ್ಮ ಪೀಳಿಗೆಯವರು, ಮನೆಯ ಸುತ್ತಲಿನ ಪರಿಸರದಲ್ಲೇ ಮಾಗುವ ಹಲವು ಹಣ್ಣುಗಳನ್ನು, ಕಾಯಿಗಳನ್ನು ಕಾಲಕಾಲಕ್ಕೆ ಕಂಡು, ತಿಂದು ಹೊಟ್ಟೆ ತುಂಬಿಸಿಕೊಂಡಿದ್ದಲ್ಲದೇ, ಅಷ್ಟರ ಮಟ್ಟಿಗೆ ಅಂತಹ ಶ್ರೀಮಂತ ರುಚಿಗಳನ್ನು ಅಸ್ವಾದಿಸಿ ದ್ದೇವೆ ಎಂಬ ತೃಪ್ತಿಯನ್ನೂ ಪಡೆದಿದ್ದೇವೆ ಎಂದು ಹೆಮ್ಮೆ ಪಟ್ಟುಕೊಳ್ಳಬಹುದು! ಅಲ್ಲವೆ?

**- ಶಶಿಧರ** ಹಾಲಾಡಿ






## ಒಲವ ಜಾತಿ

ಆಕಾಶದ ತಿಳಿನೀಲಿಯಲಿ
ಅ ಲ ೆ ಯ ಾ ಲ ೆ ಯ ಾ ಗಿ ತೇಲುತಿದ್ದ
ಅವನೆದೆಗೆ ಹಾರಬೇಕೆಂದಿದ್ದೆ
ಗರಿಬಿಚ್ಚಿ
ಬಂದೆ ಅಂಗಳಕೆ
ಬಾಳಬಂಡಿಯ ಸಾಮಾನುಗಳ
ಬೆನ್ನಚೀಲದಿ ಹೊತ್ತು
ಎಷ್ಟೊಂದು ಹಗುರ ಒಲವಿನ ಲಗೇಜು!
ಬೆಳದಿಂಗಳ ಚುಕ್ಕಿ ಚಪ್ಪರದಡಿ




ಮುಂಗಾಲ ಮೇಲೆ ನಿಂತು ಕೈಚಾಚಿ
ಇನ್ನೇನು ಮೇಲಕ್ಕೆ
ಚಿಮ್ಮಬೇಕು..
ಕೆಸರಲಿ ಸಿಕ್ಕಿಕೊಂಡಿದೆ ಕಾಲು
ಕಂಡಿರಲಿಲ್ಲ ಇಷ್ಟು ಸ್ಪಷ್ಟ ಹಿಂದೆಂದೂ
ಮನೆಯ ಬುನಾದಿಯ ಅನಾದಿ ಕೆಸರು
ಪೂರ್ವಜರೆಲ್ಲಾ ಒಮ್ಮಿಂದೊಮ್ಮೆಲೆ
ಅವಮಾನದಿ ಅತ್ತುಕರೆವ ಸದ್ದು
ಬೆಳದಿಂಗಳ ಆ ಕಾರ್ಗತ್ತಲಲಿ
ನೆನಪಾದದ್ದು ಕಲ್ಯಾಣದ ಪುಟ್ಟ ಹಣತೆ
ಎದೆಯ ಕತ್ತಲೆಯೆಲ್ಲಾ ಕಳೆದು
ಕೆಸರೆಲ್ಲ ಹಾಗೇ ಕರಗಿಹೋಗಿ
ಹಕ್ಕಿಯಾಗಿ ಅವನಂತೆ
ಏರುತ್ತಾ ಇಳಿಯುತ್ತಾ ಪ್ರೀತಿಯ
ಆಗಸದಲಿ ತೇಲಾಡಿದೆ
ಮೊದಲಸಲ ಲೋಕದಿ
ಮನುಷ್ಯರು ಕಾಣತೊಡಗಿದರು

## ಧ್ಯಾನದ ನಡಿಗೆ


ಎಲ್ಲದಕ್ಕೂ ಅವರು
ಆಕಾರವಿದೆಯೆನ್ನುತ್ತಾರೆ
ಆಸೆ ಒಮ್ಮೆಲೇ ಕಮರಿದಂತಾಗಿ
ಹಾಗೇ ಮತ್ತೆ ಚಿಗಿಯುತ್ತದೆ
ಪಕ್ಷಿಗಳು
ಗಾಳಿಯಲ್ಲಿ ಹಾರುವುದು
ಮೀನುಗಳು
ನೀರಲ್ಲಿ ಈಜುವುದು
ಜೀವಗಳು
ಬೆಳಕಲ್ಲಿ ಅರಳುವುದು
ಬಿಳಿ ಮೋಡಗಳು
ಆಕಾಶದಲ್ಲಿ ತೇಲುವುದು
ತುಂಬಾ ಇಷ್ಟ
ಗಾಳಿ ಬೆಳಕು ನೀರು
ಆಕಾಶಗಳ ಆಕಾರವೇ ಇಷ್ಟ
ಅಲ್ಲಿ ಹೆಜ್ಜೆಗಳು ಮೂಡಿದಂತೆ
ಮಾಯವೂ ಆಗುತ್ತವೆ

ನಿರಾಕಾರವಾಗುವ ಅರಿವಿನಲ್ಲಿ
ಇಟ್ಟ ಹೆಜ್ಜೆಗಳು
ಮಾಯವಾಗುವುದಿಲ್ಲ
ಶಾಸನವಾಗುವುದೂ ಇಲ್ಲ
ಕಾಲವನ್ನೇ ಧ್ಯಾನಿಸುತ್ತ
ನಡೆಯುತ್ತಿರುತ್ತವೆ



## ತಪ್ಪಿಲ್ಲ

ಇದರಲ್ಲಿ ಅಪ್ಪನದು ಏನೂ ತಪ್ಪಿಲ್ಲ. ದಯವಿಟ್ಟು ಅಪ್ಪನನ್ನ ದೂಷಿಸಬೇಡಿ. ಅವರಿಗೆ ಈ ತಿಂಗಳಂತ್ಯಕ್ಕಾಗುವಾಗ ಕಟ್ಟಬೇಕಾದ ಮನೆಯ ಸಾಲಕ್ಕೆ ಹಣ ಹೊಂದಾಣಿಕೆ ಕೆಲಸದ ಒತ್ತಡ ಮನೆಯಲ್ಲಿ ಕಿರಿಕಿರಿ, ಸುತ್ತಮುತ್ತಲಿನವರು ಮಾತನಾಡುವ ರೀತಿ, ಗೆಳೆಯರ ಕುಹಕದ ಮಾತು, ಇದೆಲ್ಲವನ್ನು ತಲೆಯೊಳಗೆ ತುಂಬಿಕೊಂಡು ತುಂಬಿಕೊಂಡು ತಾವು ಮಾಡುತ್ತಿದ್ದ ಕೆಲಸದ ಬಗ್ಗೆ ಯೋಚನೆ ಇರಲಿಲ್ಲ. ಹಾಗಾಗಿ ಮನೆಯ ನೀರಿನ ಟ್ಯಾಂಕಿನ ಬಾಗಿಲನ್ನು ತೆರೆದಿಟ್ಟು ಅವರ ಗಾಡಿಯನ್ನು ತೊಳಿತಾ ಇದ್ರು, ಆ ಗಾಡಿಯನ್ನು ತೊಳೆಯುವಾಗಲೂ ಕೂಡ ಅವರ ಮನಸ್ಸಲ್ಲಿ ಸರಿಯಾದ ಯೋಚನೆಗಳು ಓಡುತ್ತಾನೂ ಇರಲಿಲ್ಲ. ಹಾಗಾಗಿ ನನ್ನ ಕಡೆ ಗಮನ ಕೊಡುವುದಕ್ಕೆ ಆಗಲಿಲ್ಲ ನಾನದೇನೋ ಹೊಸತು ಅಂದುಕೊಂಡು ಅಂಗಳದಲ್ಲಿ ಓಡಾಡುತ್ತಿದ್ದವ ಆ ನೀರಿನ ಟ್ಯಾಂಕಿನೊಳಗೆ ಬಿದ್ದುಬಿಟ್ಟೆ. ಪುಟ್ಟ ದೇಹವಾದ ಕಾರಣ ನನ್ನ ಸ್ವರ ಮೇಲೆ ಕೇಳಲಿಲ್ಲ ನೀರು ನನ್ನ ಒಳಗೆ ಎಳೆದುಕೊಳ್ಳುತ್ತ ಹೋಯಿತು ದೇಹ ವಿಲವಿಲ ಒದ್ದಾಡಿ ನೀರು ಹೊಟ್ಟೆಯೊಳಗೆ ಇಳಿದು ಗಾಳಿಗೆ ಪ್ರವೇಶವಾಗುವುದಕ್ಕೆ ಆಗದೆ ಉಸಿರು ನಿಲ್ಲಿಸಿದೆ. ಇದರಲ್ಲಿ ಅಪ್ಪನ ತಪ್ಪೇನು ಇಲ್ಲ ನಾನೇ ದಾರಿ ತಪ್ಪಿ ಉಸಿರು ನಿಲ್ಲಿಸಿದ್ದೇನೆ ಅಪ್ಪನಿಗೆ ಯಾರು ಬೈಬೇಡಿ.



**- ಧೀರಜ್** ಬೆಳ್ಳಾರೆ

# ಚರಂಡಿ ನೀರು ಇನ್ನು ಅಸಹ್ಯವಲ್ಲ, ನಿಮ್ಮ ಅಡುಗೆ ಅನಿಲದ ಮೂಲ!

ಬೆಂಗಳೂರಿನ ಜನತೆಗೆ ಸದ್ಯದಲ್ಲೇ ಸರಬರಾಜು ಆಗಲಿದೆ ಡ್ರೈನೇಜ್ ಗ್ಯಾಸ್

ಮಿಥೇನ್ ರಾಸಾಯನಿಕ ಉಳ್ಳ ಅನಿಲ ಉತ್ಪಾದನೆ

ಬೆಂಗಳೂರಿನ ಚರಂಡಿ ನೀರನ್ನು ಒಂದೆಡೆ ಸಂಸ್ಕರಿಸಿ ಅದರಿಂದ ಅಡುಗೆ ಅನಿಲವನ್ನು ತಯಾರಿಸುವ ಬೃಹತ್ ಯೋಜನೆಗೆ ಬೆಂಗಳೂರಿನ ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್‌ಎಸ್‌ಬಿ) ಮುಂದಾಗಿದೆ. ಸರಕಾರ ಹಾಗೂ ಖಾಸಗಿ ಕಂಪನಿಗಳ ಸಹಯೋಗದಡಿಯಲ್ಲಿ ಬೆಂಗಳೂರಿನ ಚರಂಡಿ ನೀರಿನಿಂದ ಡ್ರೈನೇಜ್ ಗ್ಯಾಸ್ ತಯಾರಿಸುವ ಯೋಜನೆಗೆ ಬೆಂಗಳೂರಿನ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು (ಬಿಡಬ್ಲ್ಯೂಎಸ್‌ಎಸ್‌ಬಿ) ಮುಂದಾಗಿದೆ. ಅದರಿಂದ ವಾರ್ಷಿಕ 12ಕೋಟಿ ರು. ಆದಾಯದ ನಿರೀಕ್ಷೆಯನ್ನು ಮಂಡಳಿ ಇಟ್ಟುಕೊಂಡಿದೆ.

ಈ ಮೂಲಕ ತ್ಯಾಜ್ಯವೂ ಆದಾಯದ ಮೂಲ ಆಗುತ್ತದೆ ಎಂದು ಜಲಮಂಡಳಿ ಅಧ್ಯಕ್ಷರಾದ ಡಾ. ರಾಮ್ ಪ್ರಸಾದ್ ಮನೋಹರ್ ಹೇಳಿದ್ದಾರೆ. ದಶಕಗಳ ಹಿಂದೆ, ಪಂಜಾಬ್ ಹಾಗೂ ಚಂಡೀಗಢ ಮುಂತಾದ ಕಡೆ ಗೋವುಗಳ ತ್ಯಾಜ್ಯದಿಂದ ತಯಾರಿಸಲಾದ ಬಯೋಗ್ಯಾಸ್ ಆ ಪ್ರಾಂತ್ಯದಲ್ಲಿ ಹೊಸ ಕ್ರಾಂತಿಯನ್ನೇ ಉಂಟು ಮಾಡಿತ್ತು. ಅದಕ್ಕೂ ಇದಕ್ಕೂ ಏನು ವ್ಯತ್ಯಾಸ? ನಾವು ನಮ್ಮ ಮನೆಗಳಲ್ಲಿ ಬಳಸುವ ಲಿಕ್ವಿಫೈಡ್ ಪೆಟ್ರೋಲಿಯಂ ಗ್ಯಾಸ್‌ನಷ್ಟು (ಎಲ್‌ಪಿಜಿ) ದಕ್ಷತೆಯನ್ನು ಈ ಡ್ರೈನೇಜ್ ಗ್ಯಾಸ್ ನೀಡುತ್ತದೆಯೇ ಎಂಬುದರ ಬಗ್ಗೆ ಬನ್ನಿ ತಿಳಿಯೋಣ.

ಮೊದಲಿಗೆ, ಚರಂಡಿ ನೀರಿನಿಂದ ಇಂಧನ ಹೇಗೆ ಉತ್ಪತ್ತಿಯಾಗುತ್ತದೆ ಎಂಬುದನ್ನು ತಿಳಿಯೋಣ. ಚರಂಡಿ ನೀರನ್ನು ಏರೋಬಿಕ್ ಡೈಜೆಷನ್ ಎಂಬ ಪ್ರಕ್ರಿಯೆಗೆ ಒಳಪಡಿಸಿದಾಗ ಅದು ಎಲ್‌ಪಿಜಿಯಂಥ ಇಂಧನವನ್ನು ಸೃಷ್ಟಿಸುತ್ತದೆ. ಇದರಲ್ಲಿ ಪ್ರಧಾನವಾಗಿ ಮಿಥೇನ್ ಎಂಬ ರಾಸಾಯನಿಕ ಇರುತ್ತದೆ.

ಇದು ಎಲ್‌ಪಿಜಿಯಂತೆ ದಹನಕಾರಿ. ಇದನ್ನು ಉತ್ಪತ್ತಿ ಮಾಡುವ ವಿಧಾನ ಹೀಗಿದೆ: ಮೊದಲಿಗೆ ಚರಂಡಿ ನೀರನ್ನು ಸ್ಲಡ್ಜ್ ಕಲೆಕ್ಷನ್ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ವರ್ಗಾಯಿಸಲಾಗುತ್ತದೆ. ಅಲ್ಲಿ, ಚರಂಡಿ ನೀರಿನಲ್ಲಿ ಬೆರೆತಿರುವ ಮಣ್ಣು, ಇತ್ಯಾದಿ ಘನತ್ಯಾಜ್ಯಗಳನ್ನು ಬೇರ್ಪಡಿಸಲಾಗುತ್ತದೆ. ಆನಂತರ, ಇದನ್ನು ಅನ್‌ಏರೋಬಿಕ್ ಡೈಜೆಷನ್ ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ.

ಇಲ್ಲಿ, ದೊಡ್ಡ ದೊಡ್ಡ ಏರ್‌ಟೈಟ್ ಟ್ಯಾಂಕ್‌ಗಳಲ್ಲಿ ಸಂಗ್ರಹಿಡಲಾಗುತ್ತದೆ. ಈ ಟ್ಯಾಂಕ್‌ಗಳನ್ನು ಬಯೋಗ್ಯಾಸ್ ಡೈಜೆಸ್ಟರ್‌ಗಳೆಂದು ಕರೆಯುತ್ತಾರೆ. ಇದರೊಳಗೆ ಸಂಗ್ರಹವಾಗುವ ಚರಂಡಿ ನೀರಿನಲ್ಲಿ ಕೆಲವಾರು ರಾಸಾಯನಿಕ ಪ್ರಕ್ರಿಯೆಗಳು ನಡೆಯುತ್ತವೆ. ಆಮ್ಲಜನಕದ ಗೈರಿನಲ್ಲಿ ಚರಂಡಿ ನೀರಿನಲ್ಲಿರುವ ವಿಶೇಷ ಬ್ಯಾಕ್ಟೀರಿಯಾಗಳು ಇಡೀ ನೀರನ್ನು ರಾಸಾಯನಿಕ ಅಣುಗಳಮಟ್ಟದಲ್ಲಿ ವಿಭಜನೆಗೊಳಿಸುತ್ತವೆ. ಈ ರಾಸಾಯನಿಕ ಪ್ರಕ್ರಿಯೆಯು ಮುಂದುವರಿದು ಹೈಡ್ರೋಲಿಸಿಸ್, ಆಸಿಡೋಜೆನಿಸಿಸ್, ಆಸಿಟೋಜೆನಿಸಿಸ್ ಎಂಬ ಮೂರು ಹಂತದ ರಾಸಾ ಯನಿಕ ಪ್ರಕ್ರಿಯೆಗಳು ನಡೆಯುತ್ತವೆ.

ಕಟ್ಟಕಡೆಯಲ್ಲಿ ಮಿಥಾನೊಜೆನಿಸಿಸ್ ಎಂಬ ಪ್ರಕ್ರಿಯೆ ನಡೆಯುತ್ತದೆ. ಇದರಲ್ಲಿಯೇ ಮಿಥೇಲ್ ಅನಿಲ ಉತ್ಪತ್ತಿಯಾಗುತ್ತದೆ. ಈ ಅನಿಲವು ನೀರಿನಿಂದ ಬೇರ್ಪಟ್ಟು ಮೇಲಕ್ಕೆ ಹೋಗುತ್ತದೆ. ಅದನ್ನು ಕೊಳವೆಗಳ ಮೂಲಕ ಸ್ಟೋರೇಜ್ ಕಂಟೈನರ್‌ಗಳಲ್ಲಿ ಸಂಗ್ರಹಿಸಲಾಗುತ್ತದೆ. ಮೇಲಿನ ಪ್ರಕ್ರಿಯೆಯಲ್ಲಿ ಮಿಥೇನ್ ಅನಿಲ ಉತ್ಪತ್ತಿಯಾದ ಕೂಡಲೇ ಅದು ಎಲ್‌ಪಿಜಿಯಂತೆ ಅಡುಗೆ ಅನಿಲವಾಗಿರುವುದಿಲ್ಲ. ಏಕೆಂದರೆ, ಆ ಕಚ್ಚಾ ಮಿಥೇನ್ ಅನಿಲದಲ್ಲಿ ಶೇ 50-70ರಷ್ಟು ಮಿಥೇನ್ ಅನಿಲವಿದ್ದರೆ, ಶೇ.30-40ರಷ್ಟು ಕಾರ್ಬನ್ ಡೈಆಕ್ಸೈಡ್ ಇರುತ್ತದೆ.


ಇದರ ಜೊತೆಗೆ, ತ್ಯಾಜ್ಯ ನೀರಿನ ಕೆಲವು ಕಣಗಳು, ಹೈಡ್ರೋಜನ್ ಸಲ್ಫೈಡ್ ಇರುತ್ತದೆ. ಇದನ್ನು ಎಲ್‌ಪಿಜಿಯಂಥ ಇಂಧನವನ್ನಾಗಿಸಲು ಈ ಕೆಳಗಿನ ಮೂರು ವಿಧಾನಗಳನ್ನು ಅನುಸರಿಸಲಾಗುತ್ತದೆ.

**1. ಸ್ಕ್ರಬಿಂಗ್:** ಸ್ಟೀಲ್‌ನ ನಾರು ತುಂಬಿರುವ ಕೊಳವೆಗಳಿಂದ ಈ ಮಿಥೇನ್ ಅನಿಲವನ್ನು ಹಾಯಿಸಿ, ಅದನ್ನು ಸೋಸಲಾಗುತ್ತದೆ. ಇದರಿಂದ ಕಾರ್ಬನ್ ಡೈ ಆಕ್ಸೈಡ್ ಹಾಗೂ ಹೈಡ್ರೋಜನ್ ಸಲ್ಫೈಡ್ ಅನಿಲಗಳನ್ನು ತೆಗೆದುಹಾಕಲಾಗುತ್ತದೆ. ಈ ಹಂತದಲ್ಲಿ ಈ ಅನಿಲದ ಕೆಟ್ಟ ವಾಸನೆಯನ್ನೂ ಹೋಗಲಾಡಿಸಲಾಗುತ್ತದೆ.

**2. ಅಪ್ ಗ್ರೇಡಿಂಗ್:** ಮೇಲಿನ ಹಂತದಲ್ಲಿ ಕಾರ್ಬನ್ ಡೈ ಆಕ್ಸೈಡ್ ಸಂಪೂರ್ಣವಾಗಿ ನಿರ್ಮೂಲನೆ ಯಾಗಿರುವುದಿಂದ ಈಗಿರುವ ಮಿಥೇನ್ ಅನಿಲವು ಬಯೋಮಿಥೇನ್ ರೂಪವನ್ನು ಗಳಿಸಿರುತ್ತದೆ. ಇದನ್ನು, ಮರುಬಳಕೆ ಮಾಡಬಹುದಾದ ನೈಸರ್ಗಿಕ ಇಂಧನ ಎಂದು ಕರೆಯುತ್ತಾರೆ. ಇದು ಮನೆಗಳಲ್ಲಿ ಬಳಸುವ ಎಲ್‌ಪಿಜಿ ಹಾಗೂ ವಾಹನಗಳಲ್ಲಿ ಬಳಸುವ ಸಿಎನ್‌ಜಿಯಷ್ಟೇ ಪರಿಣಾಮಕಾರಿ ಆಗಿರುತ್ತದೆ.

> ಕಟ್ಟಕಡೆಯಲ್ಲಿ ಮಿಥಾನೊಜೆನಿಸಿಸ್ ಎಂಬ ಪ್ರಕ್ರಿಯೆ ನಡೆಯುತ್ತದೆ. ಇದರಲ್ಲಿಯೇ ಮಿಥೇಲ್ ಅನಿಲ ಉತ್ಪತ್ತಿಯಾಗುತ್ತದೆ. ಈ ಅನಿಲವು ನೀರಿನಿಂದ ಬೇರ್ಪಟ್ಟು ಮೇಲಕ್ಕೆ ಹೋಗುತ್ತದೆ. ಅದನ್ನು ಕೊಳವೆಗಳ ಮೂಲಕ ಸ್ಟೋರೇಜ್ ಕಂಟೈನರ್‌ಗಳಲ್ಲಿ ಸಂಗ್ರಹಿಸಲಾಗುತ್ತದೆ. ಮೇಲಿನ ಪ್ರಕ್ರಿಯೆಯಲ್ಲಿ ಮಿಥೇನ್ ಅನಿಲ ಉತ್ಪತ್ತಿಯಾದ ಕೂಡಲೇ ಅದು ಎಲ್‌ಪಿಜಿಯಂತೆ ಅಡುಗೆ ಅನಿಲವಾಗಿರುವುದಿಲ್ಲ.

**3. ಕಂಪ್ರೆಷನ್:** ಈ ಹಂತದಲ್ಲಿ ಇದನ್ನು ತೀವ್ರ ಒತ್ತಡದಲ್ಲಿ ಟ್ಯಾಂಕುಗಳಲ್ಲಿ ಕಂಪ್ರೆಸ್ ಮಾಡಿ ಸಂಗ್ರಹಿಸಲಾಗುತ್ತದೆ. ಇದರಿಂದ ಇದರ ಸುಲಭ ಸಾಗಣೆ ಸಾಧ್ಯ. ಡ್ರೈನೇಜ್ ಗ್ಯಾಸ್, ಗೋಬರ್ ಗ್ಯಾಸ್ ಒಂದೇನಾ? ಹೌದು. ಇವೆರಡೂ ಒಂದೇ. ಈ ಎರಡನ್ನೂ ಬೇರೆ ಬೇರೆ ಮೂಲಗಳಿಂದ ಪಡೆಯಲಾಗುತ್ತದಷ್ಟೆ. ಆದರೆ, ಇವೆರಡನ್ನೂ ತಯಾರಿಸುವ ವಿಧಾನ, ಇವುಗಳಲ್ಲಿರುವ ರಾಸಾಯನಿಕಗಳ ಆಧಾರದಲ್ಲಿ ಹೇಳುವುದಾದರೆ ಇವೆರಡೂ ಒಂದೇ. ಇವೆರಡೂ ಬಯೋಗ್ಯಾಸ್ ಕ್ಯಾಟಗರಿ ಅಡಿಯಲ್ಲಿ ಬರುತ್ತದೆ. ಹೆಸರು ಮಾತ್ರ ಗೋ ಬರ್ ಗ್ಯಾಸ್ (ಗೋವುಗಳ ಸಗಣಿಯಿಂದ ಮಾಡಿದ್ದು), ಡ್ರೈನೇಜ್ ಗ್ಯಾಸ್ (ಚರಂಡಿ ನೀರಿನಿಂದ ಮಾಡಿದ್ದು).



### ಈ ಅನಿಲಗಳ ಕ್ಷಮತೆ ಹೇಗೆ?

ಮನೆಗಳಲ್ಲಿ ನಾವು ಬಳಸುವ ಎಲ್‌ಪಿಜಿ ಗ್ಯಾಸ್‌ಗೆ ಹೋಲಿಸಿದರೆ ಡ್ರೈನೇಜ್ ಗ್ಯಾಸ್ ಅಥವಾ ಗೋಬರ್ ಗ್ಯಾಸ್ ಗಳ ಕ್ಷಮತೆ ಹೇಗೆ? ಎಂಬ ಪ್ರಶ್ನೆ ಬರುತ್ತದೆ. ಡ್ರೈನೇಜ್ ಗ್ಯಾಸ್ ಅಥವಾ ಗೋಬರ್ ಗ್ಯಾಸ್‌ಗಳನ್ನು ತಯಾರಿಸಿ ಬಳಸಬಹುದು. ಆದರೆ, ಇವಕ್ಕೆ ಹೋಲಿಸಿದರೆ ಎಲ್‌ಪಿಜಿ ಪವರ್ ಫುಲ್. ಅದು ಹೇಗೆಂದರೆ, ಪ್ರತಿಯೊಂದು ವಸ್ತುವಿಗೂ ಸಾಂದ್ರತೆ ಎಂಬ ಗುಣವಿರುತ್ತದೆ. ವಸ್ತುವು ಹೆಚ್ಚು ಸಾಂದ್ರವಾಗಿದ್ದರೆ, ಅದರ ಅಣುಗಳು ಹತ್ತಿರದಲ್ಲಿದ್ದು, ತೂಕ ಹೆಚ್ಚಾಗಿರುತ್ತದೆ (ಉದಾಹರಣೆಗೆ: ಕಬ್ಬಿಣ). ಸಾಂದ್ರತೆ ಕಡಿಮೆಯಿದ್ದರೆ, ಅಣುಗಳು ದೂರವಿದ್ದು ತೂಕ ಕಡಿಮೆ ಇರುತ್ತದೆ (ಉದಾಹರಣೆಗೆ: ಕಾಗದ ಅಥವಾ ನೀರು).

ಇಲ್ಲಿ ಡ್ರೈನೇಜ್ ಗ್ಯಾಸ್ ಹಾಗೂ ಗೋಬರ್ ಗ್ಯಾಸ್ ಎರಡೂ ಕಡಿಮೆ ಸಾಂದ್ರತೆಯುಳ್ಳವು. ಹಾಗಾಗಿ, ಒಂದು ಕ್ಯೂಬಿಕ್ ಅಳತೆಯ ಡಬ್ಬಿಯಲ್ಲಿ ಇವುಗಳನ್ನು ತುಂಬಿಸಿದಾಗ, ಡ್ರೈನೇಜ್ ಗ್ಯಾಸ್ 1.20 ಕೆಜಿ ಹಿಡಿಸಿದರೆ, ಅದೇ ಕ್ಯೂಬಿಕ್ ಮೀಟರ್ ಜಾಗದಲ್ಲಿ ಗೋಬರ್ ಗ್ಯಾಸ್ 1.15 ಕೆಜಿಯಷ್ಟು ತುಂಬುತ್ತದೆ. ಇನ್ನು, ಎಲ್‌ಪಿಜಿಯು 2.50 ಕೆಜಿಯಷ್ಟು ಹಿಡಿಸುತ್ತದೆ.

ಅಂದರೆ, ಎಲ್‌ಪಿಜಿಯೇ ಹೆಚ್ಚು ತೂಕವುಳ್ಳದ್ದು. ಇನ್ನು, ಕ್ಷಮತೆಯ ವಿಚಾರಕ್ಕೆ ಬರುವುದಾದರೆ, ಎಲ್‌ಪಿಜಿ ಹೆಚ್ಚು ಪವರ್‌ಫುಲ್ ಇಂಧನ. ಇದರಿಂದ ಹೊರಹೊಮ್ಮುವ ಉಷ್ಣಾಂಶ ಪ್ರತಿ ಕ್ಯೂಬಕ್ ಮೀಟರ್‌ನಲ್ಲಿ ತುಂಬಬಹುದಾದ ಎಲ್‌ಪಿಜಿ ಇಂಧನವನ್ನು ದಹಿಸಿದಾಗ 11000 ದಿಂದ 12000 ಕಿಲೋ ಕ್ಯಾಲರಿಯಷ್ಟು ಶಕ್ತಿ ಉತ್ಪಾದನೆಯಾಗುತ್ತೆ.

ಆದರೆ, ಗೋಬರ್‌ನಿಂದಾಗಿ ಪ್ರತಿ ಕ್ಯೂಬಿಕ್ ಮೀಟರ್‌ನಲ್ಲಿರುವ ಡ್ರೈನೇಜ್ ಗ್ಯಾಸ್ ಉರಿಸಿದಾಗ 4500 ರಿಂದ 5500 ಕಿಲೋಕ್ಯಾಲರಿ ಯಷ್ಟು ಶಕ್ತಿ ಉತ್ಪಾದನೆಯಾಗುತ್ತದೆ. ಇನ್ನು, ಒಂದು ಕ್ಯೂಬಿಕ್ ಮೀಟರ್‌ನಲ್ಲಿರುವ ಗೋಬರ್ ಗ್ಯಾಸನ್ನು ಉರಿಸಿದಾಗ 4700ರಿಂದ 6000 ಕಿಲೋಕ್ಯಾಲರಿಯಷ್ಟು ಶಕ್ತಿ ಉತ್ಪಾದನೆಯಾಗುತ್ತದೆ.

### ಭಾರತದಲ್ಲಿ ಬಯೋಗ್ಯಾಸ್ ಇರುವ ತಾಣಗಳು

ಭಾರತದಲ್ಲಿ ಡ್ರೈನೇಜ್ ನೀರಿನಿಂದ ಅಡುಗೆ ಅನಿಲ ತಯಾರಿಸುವ ಘಟಕಗಳು ಕೆಲವೆಡೆ ಇವೆ. ತಮಿಳುನಾಡಿನ ಸೆಲೈಯ್ಯೂರ್‌ನಲ್ಲಿ ಸಾರ್ವಜನಿಕ ಶೌಚಾಲಯದ ನೀರಿನಿಂದ ಅಡುಗೆ ಅನಿಲವನ್ನು ತಯಾರಿಸಲಾಗುತ್ತಿದೆ. ಬಯೋ-ಮಿಥೇನೇಷನ್ ಪ್ಲಾಂಟ್ ಮೂಲಕ ತಯಾರಾಗುವ ಈ ಅನಿಲವು ಅಲ್ಲಿನ 30 ಮನೆಗಳಿಗೆ ಸಪ್ಲೈ ಆಗುತ್ತದೆ. ಡ್ರೈನೇಜ್ ಗ್ಯಾಸ್‌ನ ಮತ್ತೊಂದು ಉತ್ಪಾದನಾ ಘಟಕವನ್ನು ಉತ್ತರ ಪ್ರದೇಶದ ಅಲ್ಲಲ್ಲಿ ಕಾಣಬಹುದು. ಘಾಸಿಯಾಬಾದ್‌ನ ಇಂಜಿನಿಯರಿಂಗ್ ವಿದ್ಯಾರ್ಥಿಗಳಾದ ಅಭಿಷೇಕ್ ವರ್ಮಾ, ಅಭಿನೇಂದ್ರ ಪಟೇಲ್ ಎಂಬುವರು ಗಾಜಿಯಾಬಾದ್‌ನ ಸೂರ್ಯನಗರ್ ರಾಜಕಾಲುವೆಯಲ್ಲಿ ಹರಿಯುತ್ತಿದ್ದ ನೀರನ್ನು ಪರೀಕ್ಷೆಗೊಳಪಡಿಸಿ ಅದರಲ್ಲಿ ಶೇ. 65ರಷ್ಟು ಪರಿಶುದ್ಧವಾದ ಮಿಥೇನ್ ಇರುವುದನ್ನು ಪತ್ತೆ ಮಾಡಿದ್ದರು. ಅದರಿಂದ ಅಡುಗೆ ಅನಿಲವನ್ನು ಸಣ್ಣಪ್ರಮಾಣದಲ್ಲಿ ತಯಾರಿಸಿ ಅದೇ ಹತ್ತಿರದಲ್ಲಿದ್ದ ರಾಮು ಎಂಬಾತನ ಟೀ ಅಂಗಡಿಗೆ ಸರಬರಾಜು ಮಾಡುವಂತೆ ಮಾಡಿದ್ದರು. ಅದು ನಂತರ ಮಾಧ್ಯಮಗಳಲ್ಲಿ ವರದಿಯಾಗಿ ಇತರಸಣ್ಣ ಚಹಾ ಅಂಗಡಿಗಳು ಡ್ರೈನೇಜ್ ನೀರನ್ನೇ ಬಳಸಿ ಅನಿಲ ಉತ್ಪಾದನೆ ಮಾಡಿಕೊಂಡು ಅದನ್ನೇ ತಮ್ಮ ಚಹಾ ಅಂಗಡಿಯ ಇಂಧನವನ್ನಾಗಿ ಮಾಡಿಕೊಂಡಿವೆ.

# ಸಿಎಸ್‌ಕೆ ಎದುರು ಟೈಟನ್ಸ್‌ಗೆ ಸುಲಭ ಜಯ

## ಸಾಯಿ ಸುದರ್ಶನ್ ಅರ್ಧ ಶತಕ | ಋತುರಾಜ್ ಗಾಯಕವಾಡ್ ಏಕಾಂಗಿ ಹೋರಾಟ

• ಪ್ರಜೋದಯ ವರದಿ







**ಚೆನ್ನೈ:** ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ನೀರಸ ಪ್ರದರ್ಶನ ತೋರಿದ ಆತಿಥೇಯ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ತಂಡವು, ಗುಜರಾತ್ ಟೈಟನ್ಸ್‌ಗೆ ಸುಲಭ ತುತ್ತಾಯಿತು.

ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕಿಂಗ್ಸ್ ನೀಡಿದ್ದ 159 ರನ್‌ಗಳ ಗುರಿ ಎದುರು ಲೀಲಾಜಾಲವಾಗಿ ಆಡಿದ ಟೈಟನ್ಸ್ ಬ್ಯಾಟರ್‌ಗಳು, ಇನ್ನೂ 20 ಎಸೆತಗಳು ಬಾಕಿ ಇರುವಂತೆಯೇ 162 ರನ್ ಗಳಿಸಿದರು.

ಸಾಧಾರಣ ಗುರಿ ಬೆನ್ನತ್ತಿದೆ ಟೈಟನ್ಸ್‌ಗೆ ನಾಯಕ ಶುಭಮನ್ ಗಿಲ್ (33) ಹಾಗೂ ಸಾಯಿ ಸುದರ್ಶನ್ ಜೋಡಿ ಉತ್ತಮ ಆರಂಭ ನೀಡಿತು. ಮೊದಲ ವಿಕೆಟ್‌ಗೆ 6.2 ಓವರ್‌ಗಳಲ್ಲಿ 58 ರನ್ ಕಲೆಹಾಕಿ, ಭದ್ರ ಬುನಾದಿ ಹಾಕಿಕೊಟ್ಟಿತು.

ಗಿಲ್ ವಿಕೆಟ್ ಪತನದ ಬಳಿಕ ಸಾಯಿ ಹಾಗೂ ಜಾಸ್ ಬಟ್ಲರ್ (ಅಜೇಯ 39) ಕಳೆಕಟ್ಟಿತು. ಗೆಲುವಿಗೆ 4 ರನ್ ಬೇಕಿದ್ದಾಗ ವಿಕೆಟ್ ಒಪ್ಪಿಸಿದ ಸಾಯಿ, ಕೇವಲ 46 ಎಸೆತಗಳಲ್ಲೇ 7 ಸಿಕ್ಸರ್ ಹಾಗೂ4 ಬೌಂಡರಿ ಸಹಿತ 87 ರನ್ ಬಾರಿಸಿದರು.

ಇದರೊಂದಿಗೆ, ಟೂರ್ನಿಯಲ್ಲಿ ಆಡಿರುವ 8 ಪಂದ್ಯಗಳಲ್ಲಿ 4ನೇ ಜಯ ಸಾಧಿಸಿದ ಗಿಲ್ ಪಡೆ, ಪಾಯಿಂಟ್ ಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿತು. ಚೆನ್ನೈ ಕೂಡ ಇಷ್ಟೇ ಪಂದ್ಯಗಳನ್ನಾಡಿದ್ದು, ಮೂರರಲ್ಲಷ್ಟೇ ಗೆದ್ದಿದೆ.

ಇದಕ್ಕೂ ಮೊದಲು ನಾಯಕ ಋತುರಾಜ್ ಗಾಯಕವಾಡ್ ಅವರ ಏಕಾಂಗಿ ಹೋರಾಟದ ಬಲದಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು, ಗುಜರಾತ್ ಟೈಟನ್ಸ್ ಎದುರು ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 158 ರನ್ ಕಲೆಹಾಕಿತ್ತು.

ಟಾಸ್ ಗೆದ್ದ ಗುಜರಾತ್ ನಾಯಕ ಶುಭಮನ್ ಗಿಲ್, ಎದುರಾಳಿಯನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿದರು. ನಾಯಕನ ನಿರ್ಧಾರ ವನ್ನು ಸಮರ್ಥಿಸಿಕೊಳ್ಳುವಂತೆ ಬೌಲಿಂಗ್ ಮಾಡಿದ ವೇಗಿಗಳು, ಆತಿಥೇಯ ಕಿಂಗ್ಸ್‌ಗೆ ಆರಂಭದಲ್ಲೇ ಪೆಟ್ಟು ನೀಡಿದರು.

ಕಳೆದ ಪಂದ್ಯದಲ್ಲಿ ಶತಕ ಬಾರಿಸಿದ್ದ ಸಂಜು ಸ್ಯಾಮ್ಸನ್ (11), ಉರ್ವಿಲ್ ಪಟೇಲ್ (4), ಸರ್ಫರಾಜ್ ಖಾನ್ (0) ಹಾಗೂ ಡೆವಾಲ್ಡ್ ಬ್ರೆವಿಸ್ (2) ಬೇಗನೆ ಪೆವಿಲಿಯನ್ ಸೇರಿಕೊಂಡರು. ಹೀಗಾಗಿ, ಕೇವಲ 37 ರನ್‌ಗೆ ಪ್ರಮುಖ ನಾಲ್ಕು ವಿಕೆಟ್ ಕಳೆದುಕೊಂಡು ಅಲ್ಪ ಮೊತ್ತಕ್ಕೆ ಕುಸಿಯುವ ಆತಂಕದಲ್ಲಿದ್ದ ಕಿಂಗ್ಸ್‌ಗೆ ನಾಯಕ ಗಾಯಕವಾಡ್ ಮತ್ತು ಶಿವಂ ದುಬೆ (22) ಆಸರೆಯಾದರು.

ಈ ಇಬ್ಬರು ಐದನೇ ವಿಕೆಟ್ ಪಾಲುದಾರಿಕೆಯಲ್ಲಿ ಅರ್ಧಶತಕದ ಜೊತೆಯಾಟದ ಮೂಲಕ ಇನಿಂಗ್ಸ್‌ಗೆ ಚೇತರಿಕೆ ನೀಡುವ ಪ್ರಯತ್ನ ಮಾಡಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಕೊನವರೆಗೂ ಆಡಿದ ಗಾಯಕವಾಡ್, ತಂಡದ ಮೊತ್ತ 150ರ ಗಡಿ ದಾಟಲು ಕಾರಣರಾದರು. 60 ಎಸೆತಗಳನ್ನು ಎದುರಿಸಿದ ಅವರು 6 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 74 ರನ್ ಗಳಿಸಿ ಔಟಾಗದೆ ಉಳಿದರು.

ಗುಜರಾತ್ ಪರ ಕಗಿಸೊ ರಬಾಡ 3, ಅರ್ಶದ್ ಖಾನ್ 2, ಮೊಹಮ್ಮದ್ ಸಿರಾಜ್ ಮತ್ತು ಮಾನವ್ ಸುತಾರ್ ಒಂದೊಂದು ವಿಕೆಟ್ ಉರುಳಿಸಿದರು.

## ಶ್ವೇತಭವನದಲ್ಲಿ ದಾಳಿ: ಟ್ರಂಪ್, ಆಡಳಿತಾಧಿಕಾರಿಗಳೇ ಟಾರ್ಗೆಟ್ ಎಂದ ಬ್ಲಾಂಚೆ

• ಪ್ರಜೋದಯ ವರದಿ

**ವಾಷಿಂಗ್ಟನ್:** ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರಥಮ ಮಹಿಳೆ ಮೆಲಾನಿಯಾ ಟ್ರಂಪ್ ಭಾಗವಹಿಸಿದ್ದ ಶ್ವೇತಭವನದ ಭಾತ್ಮಿದಾರರ ಸಂಘದ ಭೋಜನ ಕೂಟದಲ್ಲಿ ಗುಂಡಿನ ದಾಳಿಗೆ ಸಂಬಂಧಿಸಿದಂತೆ ಅಮೇರಿಕಾದ ಹಂಗಾಮಿ ಅಟಾರ್ನಿ ಜನರಲ್ ಟಾಡ್ ಬ್ಲಾಂಚೆ ಪ್ರತಿಕ್ರಿಯಿಸಿದ್ದಾರೆ.

ಪ್ರಾಥಮಿಕ ತನಿಖೆಯ ಪ್ರಕಾರ, ಶಂಕಿತ ವ್ಯಕ್ತಿಯು ಆಡಳಿತದ ಉನ್ನತ ಅಧಿಕಾರಿಗಳು ಹಾಗೂ ಅಧ್ಯಕ್ಷರನ್ನು ಗುರಿಯಾಗಿಸಿಕೊಂಡು ದಾಳಿಗೆ ಸಂಚು ರೂಪಿಸಿದ್ದ ಎಂದು ಎನ್‌ಬಿಸಿ ವಾಹಿನಿಯ ಮೀಟ್ ದಿ ಪ್ರೆಸ್ ಕಾರ್ಯಕ್ರಮದಲ್ಲಿ ಬ್ಲಾಂಚೆ ತಿಳಿಸಿರುವುದಾಗಿ ಬಿಬಿಸಿ ನ್ಯೂಸ್ ವರದಿ ಮಾಡಿದೆ.

ಶಂಕಿತನು ತಂಗಿದ್ದ ಹೋಟೆಲ್ ರೂಮಿನಲ್ಲಿಯೇ ಶಸ್ತ್ರಾಸ್ತ್ರಗಳನ್ನು ಜೋಡಿಸಿಕೊಂಡಿದ್ದ ಎಂಬ ಅನುಮಾನ ವ್ಯಕ್ತವಾಗಿದೆ. ಬಂಧಿತ ವ್ಯಕ್ತಿಯು ಲಾಸ್ ಏಂಜಲೀಸ್‌ನಿಂದ ಚಿಕಾಗೊ ಮಾರ್ಗ ವಾಗಿ ರೈಲಿನಲ್ಲಿ ವಾಷಿಂಗ್ಟನ್ ಡಿಸಿಗೆ ಬಂದಿಳಿದಿದ್ದ ಎನ್ನಲಾಗಿದೆ. ಬಂಧಿತನ ವಿರುದ್ಧ ಸೋಮವಾರ ಫೆಡರಲ್ ನ್ಯಾಯಾಲಯದಲ್ಲಿ ಅಧಿಕೃತವಾಗಿ ದೋಷಾರೋಪಣಾ ಪಟ್ಟಿ ಸಲ್ಲಿಕೆಯಾಗಲಿದೆ.

## ಹರ್ಭಜನ್ ಸಿಂಗ್‌ಗೆ ನೀಡಿದ ಪೋಲಿಸ್ ಭದ್ರತೆ ಹಿಂಪಡೆದ ಪಂಜಾಬ್ ಸರ್ಕಾರ

• ಪ್ರಜೋದಯ ವರದಿ



**ಚಂಡೀಗಢ:** ಭಾರತೀಯ ಕ್ರಿಕೆಟ್ ತಂಡದ ಮಾಜಿ ಸ್ಪಿನ್ನರ್ ಮತ್ತು ರಾಜ್ಯಸಭಾ ಸಂಸದ ಹರ್ಭಜನ್ ಸಿಂಗ್ ಅವರಿಗೆ ನೀಡಲಾಗಿದ್ದ ಭದ್ರತೆಯನ್ನು ಪಂಜಾಬ್ ಸರ್ಕಾರ ಸಂಪೂರ್ಣವಾಗಿ ಹಿಂಪಡೆದಿದೆ.

ಹರ್ಭಜನ್ ಸಿಂಗ್‌ಗೆ ಪಂಜಾಬ್ ಸರ್ಕಾರದಿಂದ ಭದ್ರತೆಯನ್ನು ನೀಡಲಾಗಿತ್ತು. ಜಲಂಧರ್‌ನಲ್ಲಿರುವ ಅವರ ನಿವಾಸದ ಹೊರಗೆ ನಿಯೋಜಿಸಲಾಗಿದ್ದ ಎಲ್ಲಾ ಭದ್ರತಾ ಸಿಬ್ಬಂದಿಯನ್ನು ಈಗ ಸರ್ಕಾರದ ಆದೇಶದ ಮೇರೆಗೆ ವಾಪಸ್ ಕರೆಸಿಕೊಳ್ಳಲಾಗಿದೆ.

ಇತ್ತೀಚೆಗೆ ರಾಜ್ಯಸಭಾ ಸಂಸದ ರಾಘವ್ ಚಡ್ಡಾ ಅವರು ಆಪ್ ತೊರೆದು ಬಿಜೆಪಿ ಸೇರುವು ದಾಗಿ ಘೋಷಿಸಿದ್ದರು. ತಮ್ಮೊಂದಿಗೆ ಹರ್ಭಜನ್ ಸಿಂಗ್ ಸೇರಿ ಆಪ್‌ನ ಒಟ್ಟು 7 ಮಂದಿ ರಾಜ್ಯಸಭಾ ಸಂಸದರು ಬಿಜೆಪಿ ಸೇರುತ್ತಿದ್ದಾರೆಂದು ತಿಳಿಸಿದ್ದರು. ಈ ರಾಜಕೀಯ ಬೆಳವಣಿಗೆಯ ನಡುವೆ ಭಗವಂತ್ ಮಾನ್ ನೇತೃತ್ವದ ಆಪ್ ಸರ್ಕಾರ, ಹರ್ಭಜನ್ ಸಿಂಗ್ ಅವರ ಭದ್ರತೆಯನ್ನು ಕಡಿತಗೊಳಿಸಿದೆ ಎನ್ನಲಾಗಿದೆ.

## ದ.ಕನ್ನಡ, ಉಡುಪಿ ಪ್ರವಾಸ ಕೈಗೊಳ್ಳಲಿರುವ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್

• ಪ್ರಜೋದಯ ವರದಿ



**ಮಂಗಳೂರು:** ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಏ.27 ಮತ್ತು 28ರಂದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರವಾಸ ಕೈಗೊಳ್ಳಲಿದ್ದಾರೆ.

ಏ.27ರಂದು ರಾತ್ರಿ 7.15ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಬರುವ ಅವರು, ಬಳಿಕ ಕೊಲ್ಲೂರಿಗೆ ತೆರಳಿ ವಾಸ್ತವ್ಯ ಮಾಡುವರು.

ಏ.28ರಂದು ಬೆಳಿಗ್ಗೆ 11 ಉಡುಪಿಯ ಐಐಜಿಜೆ ಕ್ಯಾಂಪಸ್‌ಗೆ ಭೇಟಿ ನೀಡುವರು. ಮಧ್ಯಾಹ್ನ 2.45ಕ್ಕೆ ಮಂಗಳೂರಿಗೆ ಆಗಮಿಸುವರು. ಮಧ್ಯಾಹ್ನ 3.30ಕ್ಕೆ ನಗರದ ನಿಟ್ಟೆ ಡೀಮ್ಡ್ ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಎನ್.ವಿನಯ ಹೆಗ್ಡೆ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಸಂಜೆ 5.40ಕ್ಕೆ ವಿಮಾನದ ಮೂಲಕ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

## ಗುಂಡಿ ಬಿದ್ದ ರಸ್ತೆಯಲ್ಲಿ ಸಂಚಾರ ದುಸ್ತರ

• ಪ್ರಜೋದಯ ವರದಿ



**ಬೇಲೂರು:** ಪಟ್ಟಣದ ಬೇಲೂರು-ಹಳೇಬೀಡು ಮಾರ್ಗದ ಶಾಂತಿನಗರ ಸಮೀಪದ ರಸ್ತೆಯಲ್ಲಿ ತೋಡಿರುವ ಗುಂಡಿಯಿಂದ ಅಪಘಾತಗಳ ಸಂಖ್ಯೆ ಹೆಚ್ಚುತ್ತಿದ್ದು, ರಸ್ತೆ ದುರಸ್ತಿ ಮಾಡದ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಪ್ರಯಾಣಿಕರು ಪರದಾಡುವಂತಾಗಿದೆ.

ಒಂದು ತಿಂಗಳ ಹಿಂದೆ ಪೈಪ್‌ಲೈನ್ ಸಂಪರ್ಕದ ಕೆಲಸಕ್ಕಾಗಿ ತೋಡಲಾದ ಗುಂಡಿಯನ್ನು ಮುಚ್ಚದಿರುವುದರಿಂದ ವಾಹನ ಸವಾರರು ಸಂಕಷ್ಟ ಅನುಭವಿಸುತ್ತಿದ್ದಾರೆ. ದ್ವಿಚಕ್ರ ವಾಹನ ಸವಾರರು ಗುಂಡಿಯನ್ನು ತಪ್ಪಿಸಲು ಹೋಗಿ ನಿಯಂತ್ರಣ ಕಳೆದುಕೊಂಡು ಅಪಘಾತಕ್ಕೀಡಾಗುತ್ತಿರುವ ಘಟನೆಗಳು ಹೆಚ್ಚುತ್ತಿವೆ.

ಸ್ಥಳೀಯ ನಿವಾಸಿ ಹೆಚ್.ಆರ್. ಅಹ್ಮದ್ ಅಲಿಖಾನ್ ಅವರು ಮಾತನಾಡಿ, ಈ ರಸ್ತೆಯಲ್ಲಿ ದಿನನಿತ್ಯ ನೂರಾರು ವಾಹನಗಳು ಸಂಚರಿಸುತ್ತಿವೆ. ಪ್ರವಾಸಿಗರು ಹಾಗು ಜನ ಪ್ರತಿನಿಧಿಗಳು ಇದೇ ಮಾರ್ಗದಲ್ಲಿ ಓಡಾಡುತ್ತಾರೆ. ಆದರೂ ಈ ಅಪಾ ಯಕರ ಸ್ಥಿತಿಯನ್ನು ನಿರ್ಲಕ್ಷಿಸಿರುವುದು ವಿಷಾದನೀಯ. ಇತ್ತೀಚೆಗೆ ಬೈಕ್ ಸವಾರೊಬ್ಬರು ಗುಂಡಿ ತಪ್ಪಿಸಲು ಹೋಗಿ ಬಿದ್ದು ಕಾಲು ಕಳೆದು ಕೊಂಡ ಘಟನೆ ನಡೆದಿದೆ. ಕಳೆದ ಒಂದು ತಿಂಗಳಿನಿಂದ ನಿರಂತರವಾಗಿ ಅಪ ಘಾತಗಳು ಸಂಭವಿಸುತ್ತಿವೆ ಯೆಂದರು.

ನಿವೃತ್ತ ಕೃಷಿ ಅಧಿಕಾರಿ ಚಂದ್ರಶೇಖರ್ ಅವರು ಮಾತನಾಡಿ, ಒಂದೂವರೆ ತಿಂಗಳಾದರೂ ಗುಂಡಿ ಮುಚ್ಚದಿರುವುದು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾಕ್ಷಿ. ವೇಗವಾಗಿ ಬರುವ ವಾಹನಗಳು ಏಕಾಏಕಿ ಬ್ರೇಕ್ ಹಾಕುವುದರಿಂದ ಅಪಘಾತ ಸಂಭವಿಸುತ್ತಿವೆ. ವಾಹನಗಳಿಗೂ ಹಾನಿಯಾಗುತ್ತಿದೆ. ತಕ್ಷಣ ರಸ್ತೆ ದುರಸ್ತಿ ಮಾಡಿ ಜೀವ ಹಾನಿ ತಪ್ಪಿಸಬೇಕೆಂದು ಆಗ್ರಹಿಸಿದರು.

## ಏಳು ಸಂಸದರ ವಜಾಕ್ಕೆ ಒತ್ತಾಯ: ರಾಜ್ಯಸಭಾ ಸ್ಪೀಕರ್‌ಗೆ ಎಎಪಿ ಪತ್ರ

• ಪ್ರಜೋದಯ ವರದಿ



**ನವದೆಹಲಿ:** ಎಎಪಿ ತೊರೆದು ಬಿಜೆಪಿಯೊಂದಿಗೆ ವಿಲೀನಗೊಳ್ಳುವುದಾಗಿ ಇತ್ತೀಚೆಗೆ ಘೋಷಿಸಿದ ಪಕ್ಷದ ಏಳು ರಾಜ್ಯಸಭಾ ಸದಸ್ಯರನ್ನು ಅನರ್ಹಗೊಳಿಸುವಂತೆ ಕೋರಿ ರಾಜ್ಯಸಭಾ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ಅವರಿಗೆ ಅರ್ಜಿ ಸಲ್ಲಿಸಿರುವುದಾಗಿ ಆಮ್ ಆದ್ಮಿ ಪಕ್ಷದ ಸಂಸದ ಸಂಜಯ್ ಸಿಂಗ್ ಭಾನುವಾರ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಅಗತ್ಯವಿದ್ದರೆ ಈ ವಿಷಯದಲ್ಲಿ ಪಕ್ಷವು ಕಾನೂನು ಕ್ರಮ ಕೈಗೊಳ್ಳಲಿದೆ. ಏಳು ಸಂಸದರ ಈ ಕ್ರಮವು ಪಕ್ಷಾಂತರ ವಿರೋಧಿ ಕಾನೂನನ್ನು ಉಲ್ಲಂಘಿಸಿದೆ ಎಂದು ಆರೋಪಿಸಿದ್ದಾರೆ.

ಏಳು ಸಂಸದರ ಸದಸ್ಯತ್ವವನ್ನು ರದ್ದುಗೊಳಿಸುವಂತೆ ಎಎಪಿಯು ರಾಜ್ಯಸಭಾ ಅಧ್ಯಕ್ಷರನ್ನು ಒತ್ತಾಯಿಸಿದೆ. ಅವರೆಲ್ಲ ಎಎಪಿ ಟಿಕೆಟ್ ಮೇಲೆ ಮೇಲ್ಮನೆಗೆ ಆಯ್ಕೆಯಾಗಿದ್ದರು. ಆದರೆ ನಂತರ ಪಕ್ಷವನ್ನು ತೊರೆದು ಬಿಜೆಪಿಗೆ ಸೇರಲು ನಿರ್ಧರಿಸಿದ್ದಾರೆಂದು ಎಎಪಿ ತಿಳಿಸಿದೆ.

ಶುಕ್ರವಾರ ಎಎಪಿಯ ರಾಜ್ಯಸಭಾ ಸಂಸದರಾದ ರಾಘವ್ ಚಡ್ಡಾ, ಅಶೋಕ್ ಮಿತ್ತಲ್, ಸಂದೀಪ್ ಪಾಠಕ್, ಹರ್ಭಜನ್ ಸಿಂಗ್, ರಾಜೇಂದ್ರ ಗುಪ್ತಾ, ವಿಕ್ರಮ್ ಸಾಹ್ನಿ ಮತ್ತು ಸ್ವಾತಿ ಮಲಿವಾಲ್ ಅವರು ಪಕ್ಷ ತೊರೆದು ಬಿಜೆಪಿಯಲ್ಲಿ ವಿಲೀನಗೊಳ್ಳುವುದಾಗಿ ಘೋಷಿಸಿದ್ದರು. ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿ ತನ್ನ ತತ್ವಗಳು, ಮೌಲ್ಯಗಳು ಮತ್ತು ಮೂಲ ನೈತಿಕತೆಗಳಿಂದ ದೂರ ಸರಿದಿದೆ ಎಂದು ಅವರು ಆರೋಪಿಸಿದ್ದರು.

ಸಂವಿಧಾನದ ಪ್ರಕಾರ, ಒಂದು ಪಕ್ಷದ ಒಟ್ಟು ಸಂಸದರಲ್ಲಿ ಮೂರನೇ ಎರಡರಷ್ಟು ಜನರು ಮತ್ತೊಂದು ಪಕ್ಷದೊಂದಿಗೆ ವಿಲೀನಗೊಳ್ಳಬಹುದೆಂದು ಚಡ್ಡಾ ಹೇಳಿದ್ದರು. ಇದಕ್ಕೆ ಪಕ್ಷಾಂತರ ವಿರೋಧಿ ಕಾಯ್ದೆ ಅಡ್ಡ ಬರುವುದಿಲ್ಲ ಎಂದು ವಾದಿಸಿದ್ದರು. ರಾಜ್ಯಸಭೆಯಲ್ಲಿ ಎಎಪಿ ಒಟ್ಟು 10 ಸಂಸದರನ್ನು ಹೊಂದಿದ್ದು, 7 ಸಂಸದರು ಹೋಗುತ್ತಿರುವುದರಿಂದ ಯಾವುದೇ ಸಮಸ್ಯೆ ಇಲ್ಲ ಎಂದಿದ್ದರು.

ಈ ವಾದ ತಳ್ಳಿ ಹಾಕಿರುವ ಸಿಂಗ್, ಉತ್ತರಾಖಂಡ ಮತ್ತು ಅರುಣಾಚಲ ಪ್ರದೇಶಕ್ಕೆ ಸಂಬಂಧಿಸಿದ ಪ್ರಕರಣಗಳು ಸೇರಿ ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳು ಪಕ್ಷಾಂತರಗಳು ಹೇಗೆ ಅನರ್ಹತೆಗೆ ಕಾರಣವಾಗಬಹುದು ಎಂಬುದನ್ನು ಸ್ಪಷ್ಟಪಡಿಸಿವೆ ಎಂದು ಹೇಳಿದ್ದಾರೆ.

ಸಂವಿಧಾನದ 10ನೇ ಪರಿಚ್ಛೇದವನ್ನು ಉಲ್ಲೇಖಿಸಿದ ಸಿಂಗ್, ಇದು ಸಂಸದರು ಮಾಡಿರುವ ರಾಜಕೀಯ ಪಕ್ಷಾಂತರಗಳನ್ನು ಸ್ಪಷ್ಟವಾಗಿ ಅನುಮತಿಸುವುದಿಲ್ಲ ಎಂದು ಹೇಳಿದ್ದಾರೆ.

## ಸ್ವಿಸ್ ವಿಮಾನದಲ್ಲಿ ಬೆಂಕಿ: 6 ಪ್ರಯಾಣಿಕರಿಗೆ ಗಾಯ, ತಪ್ಪಿದ ದುರಂತ

• ಪ್ರಜೋದಯ ವರದಿ

**ನವದೆಹಲಿ:** ದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ವಿಟ್ಜರ್ಲೆಂಡ್ ಮೂಲದ ವಿಮಾನವೊಂದು ಟೇಕ್ ಆಫ್ ಆಗುವ ವೇಳೆ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಭಾರಿ ದುರಂತವೊಂದು ಕೂದಲೆಳೆ ಅಂತರದಲ್ಲಿ ತಪ್ಪಿದೆ. ಈ ಆಕಸ್ಮಿಕ ಘಟನೆಯಲ್ಲಿ ಆರು ಮಂದಿ ಪ್ರಯಾಣಿಕರು ಗಾಯಗೊಂಡಿದ್ದಾರೆಂದು ವಿಮಾನಯಾನ ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿಯಿಂದ ಸ್ವಿಟ್ಜರ್ಲೆಂಡ್‌ನ ಜ್ಯೂರಿಚ್‌ಗೆ ತೆರಳಬೇಕಿದ್ದ ಸ್ವಿಸ್ ವಿಮಾನಯಾನ ಸಂಸ್ಥೆಯ ಏರ್‌ಬಸ್ ವಿಮಾನ (330) ಭಾನುವಾರ ಬೆಳಿಗ್ಗೆ ಟೇಕ್ ಆಫ್ ಆಗಲು ರನ್ ವೇ ಮೇಲೆ ಚಲಿಸುತ್ತಿತ್ತು. ಈ ವೇಳೆ ವಿಮಾನದ ಒಂದು ಎಂಜಿನ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ಬೆಂಕಿ ಹೊತ್ತಿಕೊಂಡಿದೆ. ತಕ್ಷಣ ಎಚ್ಚೆತ್ತುಕೊಂಡ ಪೈಲಟ್ ವಿಮಾನವನ್ನು ನಿಲ್ಲಿಸಿದ್ದಾರೆ.

ನಂತರ ವಿಮಾನದ ತುರ್ತು ಬಾಗಿಲುಗಳನ್ನು ತೆರೆದು ಸ್ಲೈಡ್‌ಗಳ ಮೂಲಕ ಪ್ರಯಾಣಿಕರನ್ನು ರನ್ ವೇಯಲ್ಲಿ ಇಳಿಸಲಾಯಿತು. ವಿಮಾನದ ದಿಂದ ಇಳಿಯುವಾಗ 6 ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಅವರನ್ನು ತಕ್ಷಣವೇ ಹತ್ತಿರದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನದಲ್ಲಿದ್ದ 228 ಪ್ರಯಾಣಿಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಯಾವುದೇ ಅಪಾಯ ಸಂಭವಿಸಿಲ್ಲ, ಎಲ್ಲರೂ ಸುರಕ್ಷಿತವಾಗಿದ್ದಾರೆಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ.

**ವಿಮಾನಯಾನ ಸಂಸ್ಥೆಯ ಅಧಿಕೃತ ಹೇಳಿಕೆ**

ಈ ಘಟನೆ ಬಗ್ಗೆ ಸ್ವಿಸ್ ಸಂಸ್ಥೆ ಪ್ರತಿಕ್ರಿಯಿಸಿದ್ದು ಎಂಜಿನ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ತಕ್ಷಣ ಮುನ್ನೆಚ್ಚರಿಕಾ ಕ್ರಮವಾಗಿ ವಿಮಾನವನ್ನು ನಿಲ್ಲಿಸಿ ಪ್ರಯಾಣಿಕರನ್ನು ಕೆಳಗಿಳಿಸಲಾಗಿದೆ. ಅದಕ್ಕಾಗಿ ನಾವು ವಿಶೇಷ ಟಾಸ್ಕ್ ಫೋರ್ಸ್ ರಚಿಸಿದ್ದೇವೆ ಮತ್ತು ಪ್ರಯಾಣಿಕರ ಸುರಕ್ಷತೆಗೆ ಮೊದಲ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಈ ಘಟನೆಯ ವಿಡಿಯೋಗಳು ವೈರಲ್ ಆಗಿವೆ. ತಾಂತ್ರಿಕ ದೋಷಕ್ಕೆ ನಿಖರ ಕಾರಣವೇನೆಂಬ ಬಗ್ಗೆ ತನಿಖೆ ನಡೆಯುತ್ತಿದೆ.

## ಇಂದು ಜಾನಪದ ಗೀತ ಸಂಭ್ರಮ

**ಆಲೂರು:** ಕರ್ನಾಟಕ ಜಾನಪದ ಪರಿಷತ್ ಬೆಂಗಳೂರು, ಜಿಲ್ಲಾ ಜಾನಪದ ಪರಿಷತ್ ಹಾಸನ, ಆಲೂರು ತಾಲ್ಲೂಕು ಘಟಕ ಮತ್ತು ಆಲೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಜಾನಪದ ಗೀತ ಸಂಭ್ರಮ ಕಾರ್ಯಕ್ರಮ ಏ.27 ರಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ.

ಕರ್ನಾಟಕ ಜಾನಪದ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಹಂಪನಹಳ್ಳಿ ತಿಮ್ಮೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸುವರು. ಪ್ರಾಂಶುಪಾಲ ಟಿ.ಪಿ.ಪುಟ್ಟರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ ಎಂ.ಜಿ. ಪರಮೇಶ ಮಡಬಲು ಅವರು ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೇಟಿಕೆರೆ ಹಿರಿಯಣ್ಣ, ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಕಾರ್ಯದರ್ಶಿ ಎಸ್.ಎಂ.ರಘು ಪಾಳ್ಯ, ಲಯನ್ಸ್ ಸೇವಾ ಸಂಸ್ಥೆ ಅಧ್ಯಕ್ಷ ಬಿ.ಮಂಜೇಗೌಡ, ಆಂಗ್ಲ ಭಾಷಾ ಮುಖ್ಯಸ್ಥ ಕೆ.ಎನ್.ರಮೇಶ್, ಸಾಹಿತಿ ಕಮಲಮ್ಮ, ಜಿಲ್ಲಾ ಕಾರ್ಯದರ್ಶಿ ಬಿ.ಟಿ.ಮಾನವ, ಮುಖ್ಯ ಶಿಕ್ಷಕ ಎಚ್.ಜೆ.ಹರೀಶ್ ಮಡಬಲು ಭಾಗವಹಿಲಿದ್ದಾರೆ. ಈ ಸಂದರ್ಭದಲ್ಲಿ ಜಾನಪದ ಸಿರಿ ಗೌರವ ಪ್ರಶಸ್ತಿ ಪ್ರಧಾನ ಮಾಡಲಾಗುವುದೆಂದು ಸಂಘಟಕರು ತಿಳಿಸಿದ್ದಾರೆ.

## ಗಂಜಿಗೆರೆಯನ್ನು ಯಾತ್ರಾ ಸ್ಥಳವಾಗಿಸಲು ಅಗತ್ಯ ಕ್ರಮ



• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ಗಂಜಿಗೆರೆ ಲಕ್ಷ್ಮೀ ರಂಗನಾಥ ಸ್ವಾಮಿ ದೇವಾಲಯ ಯಾತ್ರಾ ತಾಣವಾಗಿ ಅಭಿವೃದ್ಧಿ ಹೊಂದಬೇಕಿದ್ದು, ಆ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದೆಂದು ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ಬಾಣಾವರ ಹೋಬಳಿ ಶಾನೆಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಂಜಿಗೆರೆ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಮಾತನಾಡಿದ ಅವರು, ನಾಡಿನ ಮೂಲೆ ಮೂಲೆ ಗಳಿಂದ ಭಕ್ತರು ದೇವಸ್ಥಾನಕ್ಕೆ ಬರುತ್ತಾರೆ. ಮಂಗಳೂರಿನಿಂದ ಆಂಧ್ರ ಪ್ರದೇಶಕ್ಕೆ ಸಂಪರ್ಕಿಸುವ ಹೆದ್ದಾರಿ ಇಲ್ಲಿ ಹಾದು ಹೋಗುತ್ತದೆ. ತಾಂತ್ರಿಕ ಕಾರಣಗಳಿಂದ ಕಾಮಗಾರಿಗೆ ಅಡೆತಡೆಯಾಗಿದ್ದು, ಭಗವಂತನ ಆಶೀರ್ವಾದದಿಂದ ಸಮಸ್ಯೆ ಇತ್ಯರ್ಥವಾಗಲಿ ಎಂದು ಪ್ರಾರ್ಥಿಸುತ್ತೇನೆಂದರು. ಈ ಕ್ಷೇತ್ರವನ್ನು ಯಾತ್ರಾ ಸ್ಥಳವಾಗಿಸುವ ನಿಟ್ಟಿನಲ್ಲಿ ಶಕ್ತಿಮೀರಿ ಶ್ರಮಿಸಲಾಗುವುದು. ಮೂಲ ಸೌಲಭ್ಯ ಕಲ್ಪಿಸಲು ಆದ್ಯತೆ ಮೇರೆಗೆ ಕ್ರಮ ವಹಿಸುತ್ತೇನೆಂದು ಭರವಸೆ ನೀಡಿದರು.

ಅರಸೀಕೆರೆ ನಗರ ಅಭಿವೃದ್ಧಿ ಯೋಜನೆ ಪ್ರಾಧಿಕಾರದ ಮಾಜಿ ಅಧ್ಯಕ್ಷ ಗಂಜಿಗೆರೆ ಚಂದ್ರಶೇಖರ್, ಯೋಗೇಶ್, ವಿಜಯ್ ಕುಮಾರ್ ಹಾಗು ಇತರರಿದ್ದರು.

## ಸಂಪೂರ್ಣ ಚೇತರಿಕೆ ಕಂಡರೂ ಮೈದಾನಕ್ಕೆ ಇಳಿಯುತ್ತಿಲ್ಲ ಧೋನಿ

• ಪ್ರಜೋದಯ ವರದಿ

**ಚೆನ್ನೈ:** ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಯ ಅರ್ಧದಷ್ಟು ಪಂದ್ಯಾವಳಿಗಳು ಮುಕ್ತಾಯ ಗೊಂಡಿವೆ. ಆದರೆ, 5 ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡ ಮಾತ್ರ ಕೇವಲ 3 ಪಂದ್ಯಗಳಲ್ಲಿ ಗೆದ್ದು, ಅಂಕಪಟ್ಟಿಯಲ್ಲಿ 5ನೇ ಸ್ಥಾನದ ಲ್ಲಿದೆ. ಈ ನಡುವೆ ಎಂ.ಎಸ್.ಧೋನಿ ಅವರು ಯಾವಾಗ ಮೈದಾನಕ್ಕೆ ಇಳಿಯುತ್ತಾರೆಂಬುದು ಇನ್ನೂ ಅಂತಿಮವಾಗಿಲ್ಲ.

ಎಂ.ಎಸ್.ಧೋನಿ ಅವರು ಗಾಯದಿಂದ ಸಂಪೂರ್ಣವಾಗಿ ಚೇತರಿಸಿಕೊಂಡಿದ್ದಾರೆ. ಗುಜರಾತ್ ಟೈಟನ್ಸ್ ವಿರುದ್ಧದ ಪಂದ್ಯದಲ್ಲಿ ತಂಡದ ಸಂಯೋಜನೆಗೆ ಸಮಸ್ಯೆಯಾಗ ಬಾರದೆಂಬ ಕಾರಣಕ್ಕೆ ತಂಡದಿಂದ ದೂರ ಇರಲು ನಿರ್ಧರಿಸಿದ್ದಾರೆಂದು ತಿಳಿಸಿದೆ.

ಸ್ನಾಯು ಸೆಳೆತದಿಂದ ಬಳಲುತ್ತಿದ್ದ ಧೋನಿ, ಕಳೆದ ವಾರ ನೆಟ್ ಸೆಷನ್‌ಗಳಿಗೆ ಹಾಜರಾಗಿದ್ದರು. ಆದರೆ, ಅವರು ಆಡುವ ತಂಡದಲ್ಲಿ ಕಾಣಿಸಿ ಕೊಳ್ಳುತ್ತಿಲ್ಲ. ಅವರ ಅಭಿಮಾನಿಗಳು ಮಾತ್ರ ಅವರನ್ನು ಮೈನದಾನದಲ್ಲಿ ನೋಡಲು ಉತ್ಸುಕರಾಗಿದ್ದಾರೆ. ಧೋನಿ ಫಿಟ್‌ನೆಸ್ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಅವರು ಮೈದಾನಕ್ಕೆ ಇಳಿಯುವುದರಿಂದ ಯುವ ಆಟಗಾರರಿಗೆ ಅವಕಾಶ ಕೈತಪ್ಪುತ್ತದೆ ಹಾಗೂ ತಂಡದ ಸಂಯೋಜನೆಗೆ ಸಮಸ್ಯೆಯಾಗುತ್ತ ದೆಂಬ ಕಾರಣಕ್ಕೆ ಅವರು ಆಡುವ ತಂಡದಲ್ಲಿ ಕಾಣಿಸಿಕೊಂಡಿಲ್ಲ.

ಸಿಎಸ್‌ಕೆ ತಂಡದ ಮಧ್ಯಮ ಕ್ರಮಾಂಕ ಕಳಪೆ ಆಟ ಪ್ರದರ್ಶಿಸುತ್ತಿದೆ. ಆದರೂ, ಧೋನಿ ಆಡುವ ಅಥವಾ ಆಡದಿರುವ ನಿರ್ಧಾರ ತೆಗೆದುಕೊಳ್ಳುವವರು ಅವರೇ ಎಂದು ವರದಿ ತಿಳಿಸಿದೆ. ಧೋನಿ ಆಡುವ ಕುರಿತು ಮಾತನಾಡಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟಿಂಗ್ ತರಬೇತುದಾರ ಮೈಕೆಲ್ ಹಸ್ಸಿ, ಧೋನಿ ಅವರು ಗಾಯದಿಂದ ಚೇತರಿ ಸಿಕೊಂಡರೆ, ವಿಕೆಟ್ ಕೀಪರ್ ಆಗಿ ಮೈದಾನಕ್ಕೆ ಬರುತ್ತಾರೆಯೇ ಹೊರತು, ಅವರು ಇಂಪ್ಯಾಕ್ಟ್ ಆಟಗಾರನಾಗಿ ಆಡುವುದಿಲ್ಲ ಎಂದಿದ್ದಾರೆ.

## ಜಿ.ಜಿ.ಜೆ.ಸಿ. ಪ್ರಧಾನ ಪ್ರೌಢಶಾಲೆಗೆ ಶೇ.94.9ರಷ್ಟು ಫಲಿತಾಂಶ



• ಪ್ರಜೋದಯ ವರದಿ

**ಹಾಸನ:** ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಜಿ.ಜಿ.ಜೆ.ಸಿ. ಪ್ರಧಾನ ಪ್ರೌಢಶಾಲೆಗೆ ಶೇ.94.9 ರಷ್ಟು ಫಲಿತಾಂಶ ಬಂದಿದೆ. ಒಟ್ಟು 59 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 56 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆಂದು ಉಪಪ್ರಾಂಶುಪಾಲ ಮಂಜುನಾಥ್ ಅವರು ತಿಳಿಸಿದರು.

ನಗರದ ಆರ್.ಸಿ.ರಸ್ತೆಯಲ್ಲಿರುವ ಜಿ.ಜಿ.ಜೆ.ಸಿ. ಪ್ರಧಾನ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿಗಳ ಫಲಿತಾಂಶ ಕುರಿತು ಮಾತನಾಡಿದ ಅವರು, ಎಂ.ವಿ.ಸಾತ್ವಿಕ 599 ಅಂಕ ಗಳಿಸಿ ಪ್ರಥಮ ಸ್ಥಾನದಲ್ಲಿದ್ದಾರೆ. ಫಾತೀಮಾ 589 ಅಂಕಗಳಿಸಿ ದ್ವಿತೀಯ ಹಾಗು ಹೆಚ್.ಎಂ.ರಚನಾ 588 ಅಂಕ ಗಳಿಸಿ ತೃತೀಯ ಸ್ಥಾನದಲ್ಲಿದ್ದಾರೆಂದು ತಿಳಿಸಿದರು.

ಒಟ್ಟಾರೆ ಉತ್ತೀರ್ಣರಾದ 56 ವಿದ್ಯಾರ್ಥಿನಿಯರಲ್ಲಿ 12 ವಿದ್ಯಾರ್ಥಿನಿಯರು ಡಿಸ್ಟಿಂಕ್ಷನ್ ಗಳಿಸಿದರೆ, 17 ವಿದ್ಯಾರ್ಥಿನಿಯರು 500ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆಂದರು.

## ಎಸ್‌ಎಸ್‌ಎಲ್‌ಸಿ: ಜೀವಿತಗೆ ಶೇ.94.24 ಫಲಿತಾಂಶ

• ಪ್ರಜೋದಯ ವರದಿ




**ಬೇಲೂರು:** ಪಟ್ಟಣದ ಪೂರ್ಣ ಪ್ರಜ್ಞಾ ಶಾಲಾ ವಿದ್ಯಾರ್ಥಿನಿ ಬಿ.ಎಸ್. ಜೀವಿತ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.94.24 ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ.

ಒಟ್ಟು 625ಕ್ಕೆ 589 ಅಂಕಗಳನ್ನು ಗಳಿಸಿರುವ ಜೀವಿತ ಪಟ್ಟಣದ ಗುಣಿಕೆರೆ ಬೀದಿಯ ನಿವಾಸಿಯಾಗಿದ್ದು, ಗಾರೆ ಕೆಲಸ ಮಾಡುವ ಸುರೇಶ್ ಹಾಗೂ ಅನಿತ ದಂಪತಿಗಳ ಪುತ್ರಿಯಾಗಿದ್ದಾಳೆ. ಆರ್ಥಿಕ ಸವಾಲುಗಳ ನಡುವೆಯೂ ಈ ಸಾಧನೆ ಗಮನಾರ್ಹವಾಗಿದ್ದು, ಕುಟುಂಬದ ಹೆಮ್ಮೆಯ ಜೊತೆಗೆ ಶಾಲೆಯ ಗೌರವವನ್ನೂ ಹೆಚ್ಚಿಸಿದೆ.

ಜೀವಿತೆಯ ಈ ಸಾಧನೆಗೆ ಶಿಕ್ಷಕರು, ಸ್ನೇಹಿತರು ಹಾಗೂ ಸ್ಥಳೀಯರು ಅಭಿನಂದನೆ ತಿಳಿಸಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಸಾಧನೆಗಳನ್ನು ಮಾಡಲಿ ಎಂದು ಹಾರೈಸಿದ್ದಾರೆ.

## ರಾಜಸ್ಥಾನದಲ್ಲಿ ರಣ ಬಿಸಲು: 46 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲು

• ಪ್ರಜೋದಯ ವರದಿ




**ಜೈಪುರ:** ದೇಶದ ವಿವಿಧೆಡೆ ಸೂರ್ಯ ಕೆಂಡದಂತೆ ಸುಡುತ್ತಿದ್ದಾನೆ. ಉತ್ತರ ಮತ್ತು ಪಶ್ಚಿಮ ಭಾರತದ ಹಲವೆಡೆ ತಾಪಮಾನ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ರಾಜಸ್ಥಾನದ ಬರ್ಮರ್ ಜಿಲ್ಲೆಯಲ್ಲಿ ಬಿಸಿ ಗಾಳಿ ತೀವ್ರಗೊಂಡಿದ್ದು, 46 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.

ರಾಜಸ್ಥಾನದ ಬಹುತೇಕ ಕಡೆ ಭಾನುವಾರ ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ದಾಟಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಬರ್ಮರ್ ಜಿಲ್ಲೆಯ ಜೈಸಲ್ಮೇರ್‌ನಲ್ಲಿ ಅತ್ಯಧಿಕ ಗರಿಷ್ಠ ತಾಪಮಾನ 46 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಉಳಿದಂತೆ, ಕೋಟ ಮತ್ತು ಚಿತ್ತೋರ್‌ಗಢದಲ್ಲಿ 45.2 ಡಿಗ್ರಿ ಸೆಲ್ಸಿಯಸ್ ಇತ್ತು. ಫಲೋಡಿಯಲ್ಲಿ 44.8 ಡಿಗ್ರಿ ಸೆಲ್ಸಿಯಸ್, ಬಿಕನೇರ್‌ನಲ್ಲಿ 44.6 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಜೋಧಪುರ ಮತ್ತು ಪಿಲಾನಿಯಲ್ಲಿ 44.4 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದರೆ, ಚುರುವಿನಲ್ಲಿ 44.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಗಂಗಾನಗರದಲ್ಲಿ 43.7 ಡಿಗ್ರಿ ಸೆಲ್ಸಿಯಸ್, ಜೈಪುರದಲ್ಲಿ 42.7 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ ಎಂದು ಇಲಾಖೆ ತಿಳಿಸಿದೆ.

ಮುಂದಿನ ಎರಡು ದಿನಗಳಲ್ಲಿ ಬಿಸಿಲಿನ ತಾಪ ಕಡಿಮೆಯಾಗುವ ಸಾಧ್ಯತೆ ಇಲ್ಲ ಎಂದು ಇಲಾಖೆ ಮುನ್ಸೂಚನೆ ನೀಡಿದೆ. ಆದರೆ, ಇದೇ 28 ರಿಂದ 30ರ ವರೆಗೆ ರಾಜ್ಯದ ಪಶ್ಚಿಮ ಮತ್ತು ಉತ್ತರ ಪ್ರದೇಶಗಳ ಕೆಲವು ಸ್ಥಳಗಳಲ್ಲಿ ಹಗುರ ಮಳೆಯಾಗಲಿದೆ ಎಂದು ತಿಳಿಸಿದೆ.

ದೇಶದ ರಾಜಧಾನಿ ನವದೆಹಲಿಯಲ್ಲಿ ಭಾನುವಾರ ಗರಿಷ್ಠ ತಾಪಮಾನ 42.1 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇದು ಋತುಮಾನದ ಸರಾಸರಿಗಿಂತ 3.1 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ನಗರದ ಪ್ರಾಥಮಿಕ ಹವಾಮಾನ ಕೇಂದ್ರವಾದ ಸಫ್ದರ್‌ಜಂಗ್ ವೀಕ್ಷಣಾಲಯದಲ್ಲಿ ಕನಿಷ್ಠ ತಾಪಮಾನವು 26.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇದು ಸಾಮಾನ್ಯಕ್ಕಿಂತ 2.4 ಡಿಗ್ರಿ ಸೆಲ್ಸಿ ಯಸ್ ಹೆಚ್ಚಾಗಿದೆ.

ನಗರದಾದ್ಯಂತ ಗರಿಷ್ಠ ತಾಪಮಾನ 42 ರಿಂದ 44 ಡಿಗ್ರಿ ಸೆಲ್ಸಿ ಯಸ್ ದಾಖಲಾಗಿದೆ ಎಂದು ಹವಾಮಾನ ಕಚೇರಿ ತಿಳಿಸಿದೆ.

**ಮಾ, ಮಾತಿ, ಮನುಷ್ ಟಿಎಂಸಿ ಹೇಳಿದ ಘೋಷ ವಾಕ್ಯವನ್ನೇ ಉಲ್ಲೇಖಿಸಿ ಟೀಕೆ**

## ಮಮತಾ ಬ್ಯಾನರ್ಜಿ ಸರ್ಕಾರದ ವಿರುದ್ಧ ಮೋದಿ ವಾಗ್ದಾಳಿ

• ಪ್ರಜೋದಯ ವರದಿ



**ಕೋಲ್ಕತ್ತಾ:** ಪ್ರಧಾನಿ ನರೇಂದ್ರ ಮೋದಿ ಅವರು ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ರಾಜ್ಯದಲ್ಲಿ ಮಹಿಳೆಯರ ವಿರುದ್ಧ ನಡೆಯುತ್ತಿರುವ ದೌರ್ಜನ್ಯಗಳನ್ನು ಉಲ್ಲೇಖಿಸಿದ ಅವರು, ಮಾ, ಮಾತಿ, ಮನುಷ್ ಎಂಬ ಟಿಎಂಸಿ ಹೇಳಿದ್ದ ಘೋಷ ವಾಕ್ಯ ಇಂದು ಅಪಹಾಸ್ಯಕ್ಕೀಡಾಗಿದೆ ಎಂದು ಟೀಕಿಸಿದ್ದಾರೆ.

ಬಂಗಾಳದಲ್ಲಿ ಇಂದು ಮಾ (ತಾಯಿ) ಕಣ್ಣೀರು ಹಾಕುತ್ತಿದ್ದಾಳೆ, ಮಾತಿ (ಮಣ್ಣು) ನುಸುಳುಕೋರರ ಪಾಲಾಗಿದೆ ಮತ್ತು ಮನುಷ್ (ಮನುಷ್ಯ) ಭಯದಲ್ಲಿ ಬದುಕುತ್ತಿದ್ದಾನೆಂದು ಪ್ರಧಾನಿ ಮೋದಿ ಲೇವಡಿ ಮಾಡಿದರು.

ಕೋಲ್ಕತ್ತಾದ ಆರ್.ಜಿ.ಕರ್ ಆಸ್ಪತ್ರೆಯ ವೈದ್ಯೆಯ ಮೇಲಿನ ದೌರ್ಜನ್ಯ, ಕಾಮ್ದುನಿ ಗ್ಯಾಂಗ್‌ರೇಪ್ ಸೇರಿ ರಾಜ್ಯದಲ್ಲಿ ನಡೆದ ಹಲವು ಪ್ರಮುಖ ಅಪರಾಧ ಪ್ರಕರಣಗಳನ್ನು ಉಲ್ಲೇಖಿಸಿದ ಮೋದಿ, ಮಹಿಳೆಯರಿಗೆ ರಕ್ಷಣೆ ನೀಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಕಿಡಿಕಾರಿದ್ದಾರೆ.

ಟಿಎಂಸಿ ಸರ್ಕಾರವು ಗೂಂಡಾಗಳನ್ನು ರಕ್ಷಿಸುತ್ತಿದೆ. ಸಂತ್ರಸ್ತೆಯರನ್ನೇ ದೂಷಿಸುತ್ತಿದೆ ಎಂದು ಗಂಭೀರ ಆರೋಪ ಮಾಡಿದ ಅವರು, ಚುನಾವಣೆ ಬಳಿಕ ಪ್ರತಿಯೊಬ್ಬ ಭ್ರಷ್ಟ ಮತ್ತು ದೌರ್ಜನ್ಯ ಎಸಗಿದವರ ಲೆಕ್ಕ ಚುಕ್ತ ಮಾಡಲಾಗುವುದು ಎಂದಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಮಹಿಳಾ ಮತದಾರರು ಮಮತಾ ಬ್ಯಾನರ್ಜಿ ಅವರ ಭದ್ರಕೋಟೆ. ಲಕ್ಷ್ಮೀರ್ ಭಂಡಾರ್, ಕನ್ಯಾಶ್ರೀಯಂತಹ ಯೋಜನೆಗಳ ಮೂಲಕ ಮಹಿಳೆಯರ ಬೆಂಬಲ ಗಳಿಸಿರುವ ಮಮತಾ ಅವರಿಗೆ ತಿರುಗೇಟು ನೀಡಲು ಬಿಜೆಪಿ ಸಜ್ಜಾಗಿದೆ. ಸಂದೇಶ್‌ಖಾಲಿ ಘಟನೆಯನ್ನು ಮುಂದಿಟ್ಟುಕೊಂಡು ಬಿಜೆಪಿ ಈಗ ಟಿಎಂಸಿಯ ಈ ವೋಟ್ ಬ್ಯಾಂಕ್ ಅನ್ನು ಸೆಳೆಯಲು ಯತ್ನಿಸುತ್ತಿದೆಂದು ಎನ್‌ಡಿಟಿವಿ ವರದಿ ಮಾಡಿದೆ.

ಮೊದಲ ಹಂತದ ಮತದಾನದಲ್ಲಿ ಬಂಗಾಳದಲ್ಲಿ ದಾಖಲೆಯ ಶೇ.91ರಷ್ಟು ಮತದಾನ ವಾಗಿದ್ದು, ಎರಡೂ ಪಕ್ಷಗಳು ಗೆಲುವಿನ ವಿಶ್ವಾಸ ವ್ಯಕ್ತಪಡಿಸಿವೆ. ಏಪ್ರಿಲ್ 29 ರಂದು ಎರಡನೇ ಹಂತದ ಚುನಾವಣೆ ನಡೆಯಲಿದ್ದು, ಮೇ 4ರಂದು ಫಲಿತಾಂಶ ಪ್ರಕಟವಾಗಲಿದೆ.

### ಜನಗಣತಿ ಸರ್ಕಾರದ ಕೆಲಸವಲ್ಲ, ಪ್ರತಿ ನಾಗರಿಕನ ಜವಾಬ್ದಾರಿ

ನವದೆಹಲಿ: ದೇಶದಾದ್ಯಂತ ನಡೆಯುತ್ತಿರುವ ಜನಗಣತಿ ಪ್ರಕ್ರಿಯೆ ಕೇವಲ ಸರ್ಕಾರದ ಕೆಲಸವಲ್ಲ, ಅದು ಪ್ರತಿ ನಾಗರಿಕನ ಜವಾಬ್ದಾರಿಯಾಗಿದ್ದು, ಈ ಅಭಿಯಾನದಲ್ಲಿ ಪ್ರತಿಯೊಬ್ಬರ ಪಾಲ್ಗೊಳ್ಳುವಿಕೆ ಅತ್ಯಗತ್ಯವೆಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ.

ತಮ್ಮ ಮಾಸಿಕ ರೇಡಿಯೊ ಕಾರ್ಯಕ್ರಮ ಮನ್ ಕಿ ಬಾತ್ ಮೂಲಕ ದೇಶವಾಸಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 2027ರ ಜನಗಣತಿಯನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಜನಗಣತಿ ಸಮಯದಲ್ಲಿ ಜನರು ನೀಡುವ ಎಲ್ಲಾ ಮಾಹಿತಿಗಳು ಸಂಪೂರ್ಣವಾಗಿ ಸುರಕ್ಷಿತ ಮತ್ತು ಗೌಪ್ಯವಾಗಿರುತ್ತವೆ. ಬಲಿಷ್ಠ ಡಿಜಿಟಲ್ ಭದ್ರತೆಯ ಮೂಲಕ ಈ ಡೇಟಾವನ್ನು ರಕ್ಷಿಸಲಾಗುತ್ತದೆಂದು ಪ್ರಧಾನಿ ಭರವಸೆ ನೀಡಿದ್ದಾರೆ.

ಭಾರತದ ಜನಗಣತಿಯು ವಿಶ್ವದ ಅತಿದೊಡ್ಡ ಪ್ರಕ್ರಿಯೆಯಾಗಿದ್ದು ಈ ಸಲದ ಜನಗಣತಿ ಯನ್ನು ಸಂಪೂರ್ಣ ಡಿಜಿಟಲ್ ರೂಪದಲ್ಲಿ ನಡೆಸಲಾಗುತ್ತಿದೆ. ಗಣತಿದಾರರು ಮೊಬೈಲ್ ಆಪ್ ಮೂಲಕ ನೇರವಾಗಿ ಮಾಹಿತಿ ದಾಖಲಿಸಲಿದ್ದಾರೆ. ಈ ಬಾರಿ ಸಾರ್ವಜನಿಕರಿಗೆ ಒಂದು ವಿಶೇಷ ಅವಕಾಶ ನೀಡಲಾಗಿದ್ದು ನಾಗರಿಕರು ಸ್ವತಃ ಆನ್‌ಲೈನ್ ಮೂಲಕ ಮಾಹಿತಿ ನೀಡಬಹುದೆಂದು ಮೋದಿ ಹೇಳಿದರು.

ಈಗಾಗಲೇ ಕೆಲವು ರಾಜ್ಯಗಳಲ್ಲಿ ಸ್ವಯಂ-ಗಣತಿ ಪ್ರಕ್ರಿಯೆ ಮುಗಿದಿದ್ದು, ಅಧಿಕಾರಿಗಳು ಮನೆಗಳ ಪಟ್ಟಿ ಮಾಡುವ ಕೆಲಸವನ್ನು ಪ್ರಾರಂಭಿಸಿದ್ದಾರೆ. ಈವರೆಗೆ ಸುಮಾರು 1.2 ಕೋಟಿ ಕುಟುಂಬಗಳು ಮಾಹಿತಿ ನೀಡಿವೆ ಎಂದು ಹೇಳಿದರು.

# ಗುಂಡಿನ ದಾಳಿ : ಡೊನಾಲ್ಡ್ ಟ್ರಂಪ್ ಪಾರು

• ಪ್ರಜೋದಯ ವರದಿ

**ವಾಷಿಂಗ್ಟನ್ :** ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಾಲ್ಗೊಂಡಿದ್ದ ಔತಣಕೂಟದ ಕಾರ್ಯಕ್ರಮದ ಸಂದರ್ಭದಲ್ಲಿ ಗುಂಡಿನ ದಾಳಿ ನಡೆದಿದ್ದು, ಅಧ್ಯಕ್ಷ ಟ್ರಂಪ್ ಸೇರಿ ಔತಣಕೂಟದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಗಣ್ಯರು ಸುರಕ್ಷಿತವಾಗಿದ್ದಾರೆ. ಯಾರಿಗೂ ಯಾವುದೇ ರೀತಿಯ ಹಾನಿಯಾಗಿಲ್ಲವೆಂದು ಅಮೇರಿಕಾ ಅಧಿಕಾರಿಗಳು ತಿಳಿಸಿದ್ದಾರೆ.

ವಾಷಿಂಗ್ಟನ್ ಹಿಲ್ಟನ್‌ನ ಹೋಟೆಲ್‌ನಲ್ಲಿ ನಿನ್ನೆ ಶ್ವೇತ ಭವನದ ವರದಿಗಾರರಿಗೆ ಔತಣ ಕೂಟವನ್ನು ಆಯೋಜಿಸಲಾಗಿತ್ತು. ಈ ಕಾರ್ಯ ಕ್ರಮದಲ್ಲಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅವರ ಪತ್ನಿ ಮೆಲನಿಯಾ ಟ್ರಂಪ್, ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಸೇರಿ ಹಲವು ಗಣ್ಯರು, ಹೆಸರಾಂತ ಪತ್ರಕರ್ತರು ಭಾಗಿಯಾಗಿದ್ದರು.

ಹೋಟೆಲ್‌ನ ಹೊರಗೆ 4-5 ಬಾರಿ ಗುಂಡು ಹಾರಿಸಿದ ಶಬ್ದ ಕೇಳಿ ಬಂದಿದ್ದು, ತಕ್ಷಣ ಕಾರ್ಯಪ್ರವೃತ್ತರಾದ ಸಿಕ್ರೆಟ್ ಸರ್ವಿಸ್ ಏಜೆಂಟ್‌ಗಳು ಮತ್ತು ಟ್ರಂಪ್ ಅವರ ಭದ್ರತಾ ಸಿಬ್ಬಂದಿ ಟ್ರಂಪ್ ಮತ್ತು ಅವರ ಕುಟುಂಬ ಹಾಗೂ ಉಪಾಧ್ಯಕ್ಷ ಜೆ.ಡಿ. ವ್ಯಾನ್ ಮತ್ತು ಅವರ ಕುಟುಂಬವನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ದು ಯಾವುದೇ ಅನಾಹುತವಾಗ ದಂತೆ ನೋಡಿಕೊಂಡರು. ಇದೇ ವೇಳೆ ವಿದೇಶಾಂಗ ಕಾರ್ಯದರ್ಶಿ ಮಾರ್ಕ್ ರುಬಿಯೋ, ರಕ್ಷಣಾ ಕಾರ್ಯದರ್ಶಿ ಪೀಟ್ ಎಗೆಟ್ ರವರನ್ನು ಸುರಕ್ಷಿತವಾಗಿ ಕರೆದೊಯ್ಯಲಾಯಿತು.



ಗುಂಡಿನ ಶಬ್ದ ಕೇಳುತ್ತಿದ್ದಂತೆ ಔತಣಕೂಟದಲ್ಲಿ ಭಾಗಿಯಾಗಿದ್ದ ಪತ್ರಕರ್ತರು ಮತ್ತು ಗಣ್ಯರು ಭಯಭೀತರಾಗಿ ಟೇಬಲ್ ಕೆಳಗೆ ಅವಿತುಕೊಂಡರು. ಕೂಡಲೇ ಭದ್ರತಾ ಪಡೆಗಳು ಮತ್ತು ನ್ಯಾಷನಲ್ ಗಾರ್ಡ್ ಹೋಟೆಲ್‌ನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು ಹೆಚ್ಚಿನ ಅನಾಹುತಗಳನ್ನು ತಡೆದರು.

ವಾಷಿಂಗ್ಟನ್ ಹಿಲ್ಟನ್ ಹೋಟೆಲ್ ಸ್ಥಳದಲ್ಲಿ ಜೋರಾಗಿ ಗುಂಡಿನ ಶಬ್ದ ಕೇಳಿ ಬಂದಿದೆ. ವೈಟ್‌ಹೌಸ್ ವರದಿಗಾರರ ಔತಣಕೂಟ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅತಿಥಿಗಳು ಮೇಜಿನ ಕೆಳಗೆ ಅಡಗಿ ಕುಳಿತಿರುವ ದೃಶ್ಯಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿವೆ.

ಪೊಲೀಸರು ಹೋಟೆಲ್‌ನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡಿದ್ದು, ಹೆಚ್ಚಿನ ಸುರಕ್ಷತೆಗೆ ಹೆಲಿಕಾಪ್ಟರ್‌ನ್ನು ರವಾನಿಸಲಾಯಿತು. ಡೊನಾಲ್ಡ್ ಟ್ರಂಪ್ ಅವರಿಗೆ ಯಾವುದೇ ಗಾಯವಾಗಿಲ್ಲವೆಂದು ಸಿಎನ್ಎನ್ ಹಾಗೂ ಅಮೇರಿಕಾದ ಇತರೆ ಮಾಧ್ಯಮಗಳು ವರದಿ ಮಾಡಿವೆ.

ಮತ್ತೊಂದು ವರದಿಯ ಪ್ರಕಾರ ಗುಂಡು ಹಾರಿಸಿದ ಶಂಕಿತ ವ್ಯಕ್ತಿಯನ್ನು ಬಂಧಿಸಲಾಗಿದೆ. ಘಟನೆಯಲ್ಲಿ ಓರ್ವ ಗಾಯಗೊಂಡಿರುವ ಬಗ್ಗೆಯೂ ವರದಿಯಾಗಿದೆ. ಈ ಕುರಿತು ನಿಖರ ಮಾಹಿತಿ ಇನ್ನೂ ಲಭ್ಯವಾಗಿಲ್ಲ. ಕಾರ್ಯಕ್ರಮದಲ್ಲಿ ಸ್ವಾಗತ ಭಾಷಣದ ನಂತರ ಟ್ರಂಪ್ ಮಾತನಾಡಲು ಮುಂದಾದ ಸಂದರ್ಭದಲ್ಲೇ ಗುಂಡಿನ ಶಬ್ದ ಕೇಳಿ ಬಂದಿದೆ ಎನ್ನಲಾಗಿದೆ.

**ಶಂಕಿತ ವ್ಯಕ್ತಿಯ ಬಂಧನ**

ಶಂಕಿತ ಶೂಟರ್‌ನನ್ನು ಪೊಲೀಸರು ಬಂಧಿಸಿದ್ದು, ಈತ ಕ್ಯಾಲಿಫೋರ್ನಿಯಾದವನಾಗಿದ್ದು, 30 ವರ್ಷ ಎಂದು ಹೇಳಲಾಗಿದೆ. ಈ ಬಗ್ಗೆ ಹೆಚ್ಚಿನ ತನಿಖೆ ನಡೆದಿದೆ. ಹೋಟೆಲ್‌ನ



## ಹಿಂಸಾಚಾರಕ್ಕೆ ಸ್ಥಾನವಿಲ್ಲ: ಮೋದಿ



**ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಾಲ್ಗೊಂಡಿದ್ದ ಔತಣಕೂಟದಲ್ಲಿ ಗುಂಡಿನ ದಾಳಿ ನಡೆದಿರುವುದನ್ನು ಖಂಡಿಸಿರುವ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಸ್ಥಾನವಿಲ್ಲ ಎಂದಿದ್ದಾರೆ.**

**ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಪ್ರಧಾನಿ ಮೋದಿ ಅವರು, ವಾಷಿಂಗ್ಟನ್ ಡಿಸಿ ಹೋಟೆಲ್‌ನಲ್ಲಿ ನಡೆದ ಭದ್ರತಾ ಲೋಪದ ಘಟನೆಯ ನಂತರ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪತ್ನಿ ಮೆಲಾನಿಯಾ, ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಸುರಕ್ಷಿತವಾಗಿದ್ದಾರೆಂದು ತಿಳಿದು ನಿರಾಳವಾಗಿದ್ದೇನೆ. ಅವರ ಸುರಕ್ಷತೆ ಹಾಗೂ ಯೋಗಕ್ಷೇಮಕ್ಕಾಗಿ ನಾನು ಹಾರೈಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಸ್ಥಾನವಿಲ್ಲ ಮತ್ತು ಅದನ್ನು ಸ್ಪಷ್ಟವಾಗಿ ಖಂಡಿಸಬೇಕೆಂದು ಮೋದಿ ಹೇಳಿದ್ದಾರೆ.**

**ಶಂಕಿತ ದಾಳಿಕೋರರನ್ನು ಬಂಧಿಸಲಾಗಿದ್ದು, ತನಿಖೆ ನಡೆಸಲಾಗುತ್ತಿದೆ. ಟ್ರಂಪ್ ಅವರನ್ನು ಗುರಿಯಾಗಿಸಿ ದಾಳಿ ನಡೆಸಲಾಗಿತ್ತೇ ಎಂಬುದು ತನಿಖೆಯ ಬಳಿಕವಷ್ಟೇ ತಿಳಿದು ಬರಲಿದೆ ಎಂದು ಅವರು ಹೇಳಿದ್ದಾರೆ.**

ವಾಲ್ ರೂಮ್‌ನಲ್ಲಿ ಅತಿಥಿಗಳು ಕುಳಿತಿದ್ದಾಗ ನಿನ್ನೆ ರಾತ್ರಿ, 9ರ ಸುಮಾರಿಗೆ ಹೋಟೆಲ್ ಹೊರ ಭಾಗದಲ್ಲಿ 4 ರಿಂದ 8 ಬಾರಿ ಗುಂಡು ಹಾರಿಸಿದ ಶಬ್ದ ಕೇಳಿಸಿದೆ ಎಂದು ಅಮೇರಿಕಾದ ಮಾಧ್ಯಮವೊಂದು ವರದಿ ಮಾಡಿದೆ.

ಔತಣಕೂಟದ ಕಾರ್ಯಕ್ರಮದಲ್ಲಿ ಗುಂಡಿನ ದಾಳಿ ನಡೆದ ಒಂದು ಗಂಟೆಯ ನಂತರ ಅಮೇರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಥ್ರೂತ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡು ನಾನು ಸುರಕ್ಷಿತವಾಗಿದ್ದೇನೆ. ಗುಂಡು ಹಾರಿಸಿದ ವ್ಯಕ್ತಿಯನ್ನು ಬಂಧಿಸಲಾಗಿದೆ. ತ್ವರಿತವಾಗಿ ದಾಳಿಕೋರರನ್ನು ಬಂಧಿಸಿದ ಭದ್ರತಾ ಪಡೆಯ ಕಾರ್ಯವನ್ನು ಶ್ಲಾಘಿಸುತ್ತೇನೆ. ಶ್ವೇತ ಭವನದ ವರದಿಗಾರರ ಔತಣಕೂಟದ ಗುಂಡಿನ ದಾಳಿ ಹಿನ್ನೆಲೆಯಲ್ಲಿ ಔತಣಕೂಟ ರದ್ದಾಗಿದ್ದು, ಹೊಸ ದಿನಾಂಕ ನಿಗದಿ ಮಾಡುವುದಾಗಿಯೂ ಅವರು ತಿಳಿಸಿದ್ದಾರೆ.

**ಯುದ್ಧಕ್ಕೂ ಗುಂಡಿನ ದಾಳಿಗೂ ಸಂಬಂಧ ಗೊತ್ತಿಲ್ಲ**

ಗುಂಡಿನ ದಾಳಿಗೂ ಇರಾನ್ ಯುದ್ಧಕ್ಕೂ ಸಂಬಂಧ ಇದೆಯೇ ಎಂಬುದು ನನಗೆ ತಿಳಿದಿಲ್ಲ. ಪ್ರಾಥಮಿಕ ಮಾಹಿತಿ ಆಧಾರದಲ್ಲಿ ಅಂತಹ ಸಾಧ್ಯತೆ ಕಡಿಮೆ ಎಂದು ಟ್ರಂಪ್ ಹೇಳಿದ್ದಾರೆ. ಈ ದಾಳಿಯ ಮೂಲಕ ನಮ್ಮನ್ನು ಎದೆಗುಂದಿಸಲು ಸಾಧ್ಯವಿಲ್ಲ. ಇರಾನ್ ಯುದ್ಧದಿಂದ ಹಿಂಜರಿಯುವುದಿಲ್ಲ. ಬಂದೂಕುಧಾರಿ ಶಸ್ತ್ರಾಸ್ತ್ರ ಹೊಂದಿದ್ದ ದಾಳಿಕೋರನ ಹಿಂದಿನ ಉದ್ದೇಶದ ಕುರಿತು ತನಿಖೆ ನಡೆಯುತ್ತಿದೆ ಎಂದು ಅವರು ತಿಳಿಸಿದ್ದಾರೆ.

## ಏ.28 ರಿಂದ ಕರ್ನಾಟಕದಲ್ಲೆಡೆ ಮಳೆ ಪ್ರಮಾಣ ಹೆಚ್ಚಳ

• ಪ್ರಜೋದಯ ವರದಿ

**ಬೆಂಗಳೂರು:** ಬಾಗಲಕೋಟೆ, ವಿಜಯಪುರ ಹಾಗೂ ಕೊಡಗಿಲ್ಲಿ ಗುಡುಗು, ಮಿಂಚು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರು ಹವಾಮಾನ ಕೇಂದ್ರದ ವಿಜ್ಞಾನಿ ಸಿ.ಎಸ್. ಪಾಟೀಲ್ ವಿಜಯ ಕರ್ನಾಟಕದ ಜೊತೆ ಮಾತನಾಡಿದ್ದು, ಮುಂದಿನ ಒಂದು ವಾರ ಕರ್ನಾಟಕದ ಕರಾವಳಿ, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಅಲ್ಲಲ್ಲಿ ಹಗುರದಿಂದ ಕೂಡಿದ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಸುಮಾರು 0.9 ಕಿಲೋಮೀಟರ್ ಎತ್ತರದಲ್ಲಿ ಟ್ರಫ್ ನಿರ್ಮಾಣವಾಗಿರುವುದರಿಂದ ಮಳೆಗೆ ಪೂರಕವಾದ ವಾತಾವರಣ ಸೃಷ್ಟಿಯಾಗಿದೆ. ಏಪ್ರಿಲ್ 26 ರಿಂದ ಮೇ 2 ರವರೆಗೆ ಕರಾವಳಿ ಜಿಲ್ಲೆಗಳಲ್ಲಿ ಮಳೆಯ ಪ್ರಭಾವ ಹೆಚ್ಚಿರಲಿದೆ.

**ಮಳೆ ಪ್ರಮಾಣದಲ್ಲಿ ಹೆಚ್ಚಳ**

ಏಪ್ರಿಲ್ 28, 29 ಮತ್ತು 30 ರಂದು ಉತ್ತರ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಮತ್ತಷ್ಟು ಏರಿಕೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮಳೆಯ ಜೊತೆಗೆ ಪ್ರತಿ ಗಂಟೆಗೆ 30 ರಿಂದ 40 ಕಿಲೋಮೀಟರ್ ವೇಗದಲ್ಲಿ ಬಿರುಗಾಳಿ ಬೀಸುವ ಸಂಭವವಿದ್ದು, ಸಾರ್ವಜನಿಕರು ಎಚ್ಚರಿಕೆ



ಯಿಂದ ಇರಲು ಸೂಚಿಸಲಾಗಿದೆ. ಕಳೆದ 24 ಗಂಟೆಯಲ್ಲಿ ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡಿನಲ್ಲಿ 1 ಸೆ.ಮೀ ಮತ್ತು ಶಿವಮೊಗ್ಗ ಜಿಲ್ಲೆಯ ಜಾಗರದಲ್ಲಿ 4 ಸೆ.ಮೀ ನಷ್ಟು ಮಳೆ ದಾಖಲಾಗಿದೆ ಎಂದರು.

**ತಾಪಮಾನ ಏರಿಕೆ**

ರಾಜ್ಯದಲ್ಲಿ ತಾಪಮಾನ ಏರಿಕೆಯೂ ಮುಂದುವರಿದಿದ್ದು, ಕೊಪ್ಪಳದಲ್ಲಿ ಗರಿಷ್ಠ 41 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಇನ್ನು ಬೆಂಗಳೂರಿನಲ್ಲಿ 36 ಡಿಗ್ರಿ ಮತ್ತು ಮಂಗಳೂರಿನಲ್ಲಿ 35 ಡಿಗ್ರಿ ಸೆಲ್ಸಿಯಸ್ ತಾಪಮಾನ ಕಂಡುಬಂದಿದೆ.

**ಬೆಂಗಳೂರಲ್ಲಿ 29 ರಿಂದ ಮಳೆ**

ರಾಜಧಾನಿ ಬೆಂಗಳೂರಿನ ಮಾಹಿತಿ ನೀಡಿರುವ ಸಿ.ಎಸ್. ಪಾಟೀಲ್ ಅವರು, ಏಪ್ರಿಲ್ 29 ರಿಂದ ಮೇ 2 ರವರೆಗೆ ನಗರದ ವಿವಿಧೆಡೆ ಮಳೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮುಂದಿನ ಒಂದು ವಾರದವರೆಗೆ ಗರಿಷ್ಠ ತಾಪಮಾನ 36 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ತಾಪಮಾನ 23 ಡಿಗ್ರಿ ಸೆಲ್ಸಿಯಸ್ ಇರಲಿದೆ.

## ಋಷಿ ಮುನಿಗಳ ತ್ಯಾಗದಿಂದ ಪರಂಪರೆ ರಕ್ಷಣೆ

» ಮೊದಲನೇ ಪುಟದಿಂದ

ಪ್ರಾಸ್ತಾವಿಕವಾಗಿ ಮಾತನಾಡಿದ ವಿರಾಜಪೇಟೆ ಅರಮೆರಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಶ್ರೀ ಶಿವಲಿಂಗ ಸ್ವಾಮೀಜಿ ಅವರು 1960ರಲ್ಲಿ ವಿದ್ಯಾರ್ಥಿ ನಿಲಯ ಸ್ಥಾಪಿಸುವ ಮೂಲಕ ಜಿಲ್ಲೆಯಲ್ಲಿ ಶೈಕ್ಷಣಿಕ ಕ್ರಾಂತಿ ಪ್ರಾರಂಭಿಸಿದರು. 1983ರಲ್ಲಿ ಐಟಿಐ ಸ್ಥಾಪಿಸಿ ಎತ್ತಿನ ಗಾಡಿಯಲ್ಲಿ ಹಳ್ಳಿ ಹಳ್ಳಿಗೆ ತಿರುಗಿ ದವಸ ಧಾನ್ಯ ಸಂಗ್ರಹಿಸಿ ವಿದ್ಯಾರ್ಥಿಗಳಿಗೆ ಆಸರೆಯಾಗಿದ್ದಾರೆ. 2009ರಲ್ಲಿ ಸ್ವಾಮೀಜಿ ಲಿಂಗೈಕ್ಯರಾದ ಬಳಿಕ ಇಲ್ಲಿಗೆ ಮಠಾಧೀಶರಾಗಿ ಯಾರೂ ಬರಲಿಲ್ಲ. ಅಂದಿನಿಂದ 2021ರ ವರೆಗೆ ಸಮಿತಿಯವರೇ ಮಠದ ಆಸ್ತಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಆ ಬಳಿಕ ವಿಜಯಕುಮಾರ ಸ್ವಾಮೀಜಿ ಅವರು ಮತ್ತಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆಂದರು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಸಾರುವ ಕಾರ್ಯಕ್ರಮಗಳು ನಮ್ಮ ಸಂಸ್ಕೃತಿ ಮತ್ತು ಸಮಾಜದ ಏಳಿಗೆಗೆ ಮಾರ್ಗದರ್ಶಕವಾಗುತ್ತವೆ. ಶ್ರೀ ವಿಜಯಕುಮಾರ ಸ್ವಾಮೀಜಿ ಅವರು ಬಂದ ನಂತರ ತಣ್ಣೀರುಹಳ್ಳ ಮಠವು ಉತ್ತಮ ರೀತಿಯಲ್ಲಿ ಬೆಳವಣಿಗೆ ಕಾಣುತ್ತಿರುವುದು ಸಂತಸದ ಸಂಗತಿ. ಮಠದ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸೇವೆಗಳು ಇನ್ನಷ್ಟು ವಿಸ್ತರಿಸುತ್ತಿರುವುದು ಶ್ಲಾಘನೀಯವಾಗಿದೆ. ಮಠದ ಅಭಿವೃದ್ಧಿ ಕಾಮಗಾರಿಗಳಿಗೆ



ಕೈಜೋಡಿಸಿ, ಸಮುದಾಯದ ಒಳಿತಿಗಾಗಿ ಶ್ರಮಿಸುವುದು ನಮ್ಮ ಕರ್ತವ್ಯವೆಂದರು.

ನಮ್ಮ ತಾತ ಜಿ. ಪುಟ್ಟಸ್ವಾಮಿ ಗೌಡರು ಸುತ್ತೂರು ಹಾಗು ಸಿದ್ದಗಂಗಾ ಮಠಗಳ ಅನುಯಾಯಿ ಆಗಿರಬೇಕೆಂದು ನನಗೆ ಯಾವಾಗಲೂ ಹೇಳುತ್ತಿದ್ದರು. ಆ ಮಾರ್ಗದಲ್ಲಿ ಖಂಡಿತವಾಗಿ ಸಾಗುತ್ತೇನೆ. ನಗರದ ಸಂತೆಪೇಟೆ ವೃತ್ತದಲ್ಲಿ ಬಸವೇಶ್ವರರ ಪುತ್ಥಳಿ ನಿರ್ಮಾಣ ಮಾಡುವ ಯೋಜನೆ ಹಾಕಿಕೊಂಡಿದ್ದು, ತ್ವರಿತಗತಿಯಲ್ಲಿ ಕ್ರಮ ವಹಿಸಲಾಗುವುದು. ಸಮುದಾಯ ಭವನ ನಿರ್ಮಾಣಕ್ಕೂ ಆದ್ಯತೆ ನೀಡಲಾಗುವುದೆಂದು ಭರವಸೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ನಮ್ಮ ತಂದೆ ದಿವಂಗತ ಹೆಚ್.ಎಸ್. ಪ್ರಕಾಶ್ ಅವರು ಪುಷ್ಪಗಿರಿ, ಜವೇನಹಳ್ಳಿ ಹಾಗು ತಣ್ಣೀರುಹಳ್ಳ ಮಠದ ಏಳಿಗೆಗೆ ಶಕ್ತಿಮೀರಿ ಶ್ರಮಿಸಿದ್ದಾರೆ. ಶಾಸಕನಾಗಿ ನಾನು ಸಹ ಜವೇನಹಳ್ಳಿ ಮಠಕ್ಕೆ 10 ಲಕ್ಷ ರೂ. ದೇಣಿಗೆ ನೀಡಿದ್ದೇನೆ. ಸಮುದಾಯದ ಏಳಿಗೆಗೆ ಕೈಲಾದ ಸಹಾಯ ಮಾಡುತ್ತೇನೆ. ಸಂತೆಪೇಟೆ ವೃತ್ತದಲ್ಲಿ ಅತಿ ಶೀಘ್ರದಲ್ಲಿ ಬಸವೇಶ್ವರ ಪುತ್ಥಳಿ ನಿರ್ಮಿಸಲಾಗುವುದೆಂದು ಭರವಸೆ ನೀಡಿದರು.

ಕನಕಪುರ ಮಠದ ಚನ್ನಬಸವ ಸ್ವಾಮೀಜಿ, ಪುಷ್ಪಗಿರಿ ಮಠದ ಸೋಮಶೇಖರ ಸ್ವಾಮೀಜಿ, ಧರ್ಮರಾಜೇಂದ್ರ ಸ್ವಾಮೀಜಿ, ಶಾಸಕ ಸಿಮೆಂಟ್ ಮಂಜು, ಹೈಕೋರ್ಟ್ ವಕೀಲ ವಿಶ್ವನಾಥ್, ಮಾಜಿ ಶಾಸಕರಾದ ಕೆ.ಎಸ್.ಲಿಂಗೇಶ್, ಬಿ.ಆರ್.ಗುರುದೇವ್, ಗ್ರಾನೈಟ್ ರಾಜಶೇಖರ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ನಿವೃತ್ತ ತಹಶೀಲ್ದಾರ್ ಶಿವಶಂಕರಪ್ಪ, ಬಿ.ಪಿ.ಐಸಾಮಿಗೌಡ, ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ನಟರಾಜು ಮತ್ತಿತರರಿದ್ದರು. ಪೂರ್ಣಕುಂಭ ಮೆರವಣಿಗೆ ಮೂಲಕ ಸುತ್ತೂರು ಸ್ವಾಮೀಜಿ ಅವರನ್ನು ಸ್ವಾಗತಿಸಲಾಯಿತು.

## ಮಹಿಳಾ ಮೀಸಲಾತಿಗಾಗಿ ಕಾಂಗ್ರೆಸ್ ಸಹಿ ಸಂಗ್ರಹ

» ಮೊದಲನೇ ಪುಟದಿಂದ

ರಾಜಕೀಯ ಲಾಭಕ್ಕಾಗಿ ಕ್ಷೇತ್ರ ಪುನರ್ ವಿಂಗಡಣೆ ಮೂಲಕ ಪ್ರಜಾಪ್ರಭುತ್ವದ ಕೊಲೆಗೆ ಮುಂದಾಗಿದೆ. ಈ ನೀತಿಯನ್ನು ಕಾಂಗ್ರೆಸ್ ಹಿಸುವುದಿಲ್ಲ. ಬಿಜೆಪಿ ಮಹಿಳಾ ಪರ ಸರ್ಕಾರ ಎಂದು ಬಿಂಬಿಸಲು ಹಲವು ಪ್ರಯತ್ನ ನಡೆಸುತ್ತಿದೆ. ಮಹಿಳಾ ಸಬಲೀಕರಣದ ಬಗ್ಗೆ ನಿಜವಾದ ಬದ್ಧತೆ ಇದ್ದರೆ ಶೇ. 33 ಮೀಸಲಾತಿ ಮಸೂದೆಯನ್ನು ಪ್ರತ್ಯೇಕವಾಗಿ ಮಂಡಿಸಬೇಕೆಂದರು. ಜನಸಂಖ್ಯೆ ಆಧಾರಿತ ಕ್ಷೇತ್ರ ಪುನರ್ ವಿಂಗಡಣೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರ ಕುತಂತ್ರ ಬಿಟ್ಟು ಮಹಿಳಾ ಮೀಸಲಾತಿ ಬಿಲ್ ಪಾಸ್ ಮಾಡುವ ಮೂಲಕ ಬದ್ಧತೆ ಪ್ರದರ್ಶಿಸಲಿ ಎಂದು ಸವಾಲೆಸೆದರು.

ಪುರಸಭೆ ಸದಸ್ಯೆ ಸೌಭಾಗ್ಯ ಆಂತೋಣಿ ಅವರು ಮಾತನಾಡಿ, ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಶೇ. 50 ರಷ್ಟಿದ್ದರೂ ರಾಜಕೀಯ ಕ್ಷೇತ್ರದಲ್ಲಿ ಕೇವಲ ಶೇ. 5ರಷ್ಟು ಅವಕಾಶ ಕಲ್ಪಿಸಲಾಗಿದೆ. ಮಹಿಳೆಯರು ರಾಜಕೀಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದು ಅಗತ್ಯ. ಮೀಸಲಾತಿಗೆ ಕೆಲ ರಾಜಕೀಯ ಪಕ್ಷಗಳು ವಿರೋಧ ವ್ಯಕ್ತಪಡಿಸುತ್ತಿದ್ದು, ಇಂದಿನ ಸೀಟು ಹಂಚಿಕೆಯಲ್ಲಿ ಬದಲಾವಣೆ ಆಗುವ ಭಯವೇ ಅದಕ್ಕೆ ಕಾರಣ. ಜನಗಣತಿಯ ಕಾರಣ ತೋರಿಸಿ ಮೀಸಲಾತಿ ಮುಂದೂಡುವ ಅಗತ್ಯವಿಲ್ಲ. ತಕ್ಷಣವೇ ಶೇ. 33 ಮಹಿಳಾ ಮೀಸಲಾತಿ ಜಾರಿಗೆ ತರಬಹುದು ಎಂಬುದು ಕಾಂಗ್ರೆಸ್ ನಿಲುವಾಗಿದೆ ಎಂದರು.

ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಎಂ.ಆರ್.ವೆಂಕಟೇಶ್, ಪುರಸಭೆ ಅಧ್ಯಕ್ಷೆ ಉಷಾ ಸತೀಶ್, ಸದಸ್ಯೆ ಮೀನಾಕ್ಷಿ ವೆಂಕಟೇಶ್, ಜಮೀಲಾ ತೌಫಿಕ್, ಸದಸ್ಯ ಬಿ.ಗಿರೀಶ್, ಜ್ಯೋತಿ, ರಶ್ಮಿ ಮಂಜುನಾಥ್, ವಿಶಾಲಾಕ್ಷಿ, ರವೀಶ್ ಬಸವಾಪುರ, ದೇವು ಇತರರಿದ್ದರು.

## ಮಹಿಳಾ ಮೀಸಲಾತಿ: 4 ರಾಜ್ಯಗಳಲ್ಲಿ ವಿಶೇಷ ಅಧಿವೇಶನ

• ಪ್ರಜೋದಯ ವರದಿ

**ನವದೆಹಲಿ:** ಮಹಿಳಾ ಮೀಸಲಾತಿ ಜಾರಿ ಮತ್ತು ಕ್ಷೇತ್ರ ಪುನರ್ ವಿಂಗಡಣೆ ವಿಚಾರವಾಗಿ ಕೇಂದ್ರ ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವಿನ ಸಂಘರ್ಷ ತಾರಕಕ್ಕೇರಿದೆ. ಈ ಸಂಬಂಧ ವಿರೋಧ ಪಕ್ಷಗಳ ವಿರುದ್ಧ ಆಂದೋಲನ ನಡೆಸುತ್ತಿರುವ ಬಿಜೆಪಿಯು ತಮ್ಮ ಪಕ್ಷದ ಆಡಳಿತವಿರುವ ಮಧ್ಯಪ್ರದೇಶ, ಹರಿಯಾಣ, ದೆಹಲಿ ಮತ್ತು ಒಡಿಶಾ ಸೇರಿ 4 ರಾಜ್ಯಗಳಲ್ಲಿ ರಾಜಕಾರಣದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕುರಿತು ಚರ್ಚಿಸಲು ವಿಶೇಷ ಅಧಿವೇಶನ ಕರೆಯಲು ನಿರ್ಧರಿಸಿದೆ.

ಮಧ್ಯಪ್ರದೇಶ ಮತ್ತು ಹರಿಯಾಣ ವಿಧಾನಸಭೆಗಳಲ್ಲಿ ಏ. 27ರಂದು ಚರ್ಚೆ ನಡೆಯಲಿದೆ. ದೆಹಲಿ ವಿಧಾನ



ಸಭೆಯು ಮರುದಿನ (ಏ. 28) ಅಧಿವೇಶನ ಕರೆದಿದ್ದರೆ, ಒಡಿಶಾ ವಿಧಾನ ಸಭೆಯಲ್ಲಿ ಏಪ್ರಿಲ್ 30ರಂದು ಈ ಕುರಿತು ಚರ್ಚಿಸಲು ದಿನಾಂಕ ನಿಗದಿಯಾಗಿದೆ. ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿ ಜಾರಿಗೆ ತರುವ ಗುರಿ ಹೊಂದಿದ್ದ ಸಂವಿಧಾನ (131ನೇ ತಿದ್ದುಪಡಿ) ಮಸೂದೆಯು ಈ ತಿಂಗಳ ಆರಂಭದಲ್ಲಿ ನಡೆದ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಮೂರನೇ ಎಡರಷ್ಟು ಬಹುಮತ ಸಿಗದೆ ಸೋಲು ಕಂಡಿತ್ತು. ಮಸೂದೆಯ ಪರವಾಗಿ 298 ಮತಗಳು ಚಲಾವಣೆಯಾದರೆ, ಅಗತ್ಯವಿದ್ದ 352 ಮತಗಳ ಕೊರತೆ ಯಿಂದಾಗಿ ಮಸೂದೆ ಸೋಲು ಅನುಭವಿಸಿತ್ತು. ವಿರೋಧ ಪಕ್ಷಗಳು ಮಸೂದೆಯ ವಿರುದ್ಧ 230 ಮತಗಳನ್ನು ಚಲಾಯಿಸಿದ್ದವು. ಮಸೂದೆ ವಿಫಲವಾದ ಬೆನ್ನಲ್ಲೇ, ವಿರೋಧ ಪಕ್ಷಗಳ ಮಹಿಳಾ ವಿರೋಧಿ ನಿಲುವನ್ನು ಜನರ ಮುಂದೆ ಬಯಲು ಮಾಡಲು ಬೀದಿಗೆ ಇಳಿಯುವುದಾಗಿ ಬಿಜೆಪಿ ಘೋಷಿಸಿತ್ತು. ಈ ಆರೋಪವನ್ನು ತಳ್ಳಿಹಾಕಿರುವ ವಿರೋಧ ಪಕ್ಷಗಳು, ಇದು ಮಹಿಳಾ ಮೀಸಲಾತಿ ಹೆಸರಿನಲ್ಲಿ ತರಲಾದ ಕ್ಷೇತ್ರ ಪುನರ್ ವಿಂಗಡಣೆ ಮಸೂದೆ ಯಾಗಿದೆ. ಮೀಸಲಾತಿಯನ್ನು ತಕ್ಷಣವೇ ಜಾರಿಗೆ ತರುವ ರಾಜಕೀಯ ಇಚ್ಛಾಶಕ್ತಿ ಸರ್ಕಾರಕ್ಕಿಲ್ಲ ಎಂದು ತಿರುಗೇಟು ನೀಡಿದ್ದವು.

**ಕಾಂಗ್ರೆಸ್‌ನಿಂದ ರಾಷ್ಟ್ರವ್ಯಾಪಿ ಅಭಿಯಾನ**

ಇನ್ನೊಂದೆಡೆ ಲೋಕಸಭೆಯ ಸದ್ಯದ ಸಂಖ್ಯಾಬಲದಲ್ಲೇ ಮಹಿಳಾ ಮೀಸಲಾತಿಯನ್ನು ತಕ್ಷಣವೇ ಜಾರಿಗೆ ತರಬೇಕೆಂದು ಒತ್ತಾಯಿಸಿ ಕಾಂಗ್ರೆಸ್ ಪ್ರತಿಭಟನೆ ನಡೆಸಲು ಮುಂದಾಗಿದೆ. ಮೀಸಲಾತಿ ಜಾರಿಗೆ ಒತ್ತಾಯಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ 10 ಲಕ್ಷ ಅಂಚೆ ಕಾರ್ಡ್‌ಗಳನ್ನು ಕಳುಹಿಸಲು ನಿರ್ಧರಿಸಿದೆ. ಮಹಿಳಾ ಮೀಸಲಾತಿಯೊಳಗೆ ಒಬಿಸಿ ಮಹಿಳೆಯರಿಗೆ ಒಳ-ಮೀಸಲಾತಿ ಕಲ್ಪಿಸಬೇಕೆಂದು ಆಗ್ರಹಿಸಿ ರಾಷ್ಟ್ರವ್ಯಾಪಿ ಅಭಿಯಾನ ಆರಂಭಿಸಲಿದೆ. ಈ ಸಂಬಂಧ ಮೇ 1ರಂದು ಉತ್ತರ ಪ್ರದೇಶದ ಸೀತಾಪುರದಲ್ಲಿ ಮೊದಲ ಬೃಹತ್ ಸಮಾವೇಶ ಆಯೋಜಿಸಲಾಗಿದೆ.

## ಅಪ್ರಚೋದಿತ ದಾಳಿಯಿಂದ ಅಮೇರಿಕಾಗೆ ಭಾರೀ ನಷ್ಟ

### ದುರಸ್ತಿಗೆ ಬೇಕು ಬಿಲಿಯನ್ ಡಾಲರ್ | ನಷ್ಟದ ಮಾಹಿತಿ ನೀಡದ ಟ್ರಂಪ್

• ಪ್ರಜೋದಯ ವರದಿ

**ನವದೆಹಲಿ:** ಇರಾನ್ ಮೇಲೆ ಅಪ್ರಚೋದಿತ ದಾಳಿ ನಡೆಸಿ ಕೈಸುಟ್ಟುಕೊಂಡಿರುವ ಅಮೇರಿಕಾ ಲಕ್ಷಾಂತರ ಕೋಟಿ ನಷ್ಟ ಮಾಡಿಕೊಂಡಿದೆ. ಅಮೇರಿಕಾದ ನೆಲೆಗಳಿಗೆ ತೀವ್ರ ಹಾನಿಯಾಗಿದ್ದು, ಅವುಗಳ ದುರಸ್ತಿಗೆ ಹಲವು ಬಿಲಿಯನ್ ಡಾಲರ್‌ನಷ್ಟು ಹಣ ಬೇಕಿದೆ.

ಈ ವರೆಗೆ ಅಮೇರಿಕಾವು ಸಾರ್ವಜನಿಕವಾಗಿ ಹಂಚಿಕೊಂಡಿದ್ದಕ್ಕಿಂತ ವಿನಾಶದ ಪ್ರಮಾಣವು ತುಂಬಾ ಹೆಚ್ಚಾಗಿದೆ. ದುರಸ್ತಿಗೆ ಹಲವು ಶತಕೋಟಿ ಡಾಲರ್ ವೆಚ್ಚವಾಗಬಹುದೆಂದು ಅಧಿಕಾರಿಗಳು ಎನ್‌ಬಿಸಿ ನ್ಯೂಸ್‌ಗೆ ತಿಳಿಸಿದ್ದಾರೆ. ಯುದ್ಧ ಪ್ರಾರಂಭವಾದಾಗಿನಿಂದ ಗಲ್ಫ್ ಪ್ರದೇಶದ ಹಲವು ದೇಶಗಳಲ್ಲಿ ಇರಾನ್ ದಾಳಿ ನಡೆಸಿದೆ. ಕನಿಷ್ಟ ಏಳು ದೇಶಗಳಲ್ಲಿನ ಪ್ರಮುಖ ಮಿಲಿಟರಿ ತಾಣಗಳ ಮೇಲೆ ಬಾಂಬ್‌ಗಳನ್ನು ಸುರಿದಿದೆ. ಈ ಮಾರಕ ದಾಳಿಯಲ್ಲಿ ಸಂಗ್ರಹಣಾ ಗೋದಾಮುಗಳು, ಕಾರ್ಯಾಚರಣೆ ನಿರ್ವಹಿಸುವ ಕಮಾಂಡ್ ಕೇಂದ್ರಗಳು, ವಿಮಾನ



ಹ್ಯಾಂಗರ್‌ಗಳು ಮತ್ತು ಉಪಗ್ರಹ ಸಂವಹನಕ್ಕಾಗಿ ಬಳಸುವ ವ್ಯವಸ್ಥೆಗಳು ಧ್ವಂಸವಾಗಿವೆ. ರನ್‌ವೇಗಳು, ರಾಡಾರ್ ವ್ಯವಸ್ಥೆಗಳು ಮತ್ತು ಕೆಲವು ವಿಮಾನಗಳನ್ನು ಸಹ ಹಾನಿಗೊಳಿಸಲಾಗಿದೆ. ಇವೆಲ್ಲವೂ ಮಿಲಿಟರಿ ಕಾರ್ಯಾಚರಣೆ ಮತ್ತು ಕಣ್ಗಾವಲುಗೆ ನಿರ್ಣಾಯಕವಾಗಿದ್ದವು. ಅಲ್ಲದೇ, ಇರಾನಿನ ಹಳೆಯ ಎಫ್-5 ಫೈಟರ್ ಜೆಟ್ ಸಹ ಪ್ರಬಲ ಅಮೇರಿಕಾ ವಾಯು ರಕ್ಷಣಾ ವ್ಯವಸ್ಥೆಗಳನ್ನು ಭೇದಿಸಿ ದಾಳಿ ಮಾಡಿದೆ.

ಇರಾನಿನ ದಾಳಿಯಿಂದ ವಾಸ್ತವವಾಗಿ ಎಷ್ಟು ಹಾನಿಯಾಗಿದೆ ಎಂಬುದರ ಕುರಿತು ಅಮೇರಿಕಾ ರಕ್ಷಣಾ ಇಲಾಖೆ ಸಂಪೂರ್ಣ ವಿವರಗಳನ್ನು ಹಂಚಿಕೊಂಡಿಲ್ಲ. ಆ ಪ್ರದೇಶದಲ್ಲಿ ಮಿಲಿಟರಿ ಕಾರ್ಯಾಚರಣೆಗಳನ್ನು ನಿರ್ವಹಿಸುವ ಅಮೇರಿಕಾ ಸೆಂಟ್ರಲ್ ಕಮಾಂಡ್ ಸಹ ಹಾನಿಯ ವ್ಯಾಪ್ತಿಯ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದೆ. ಈ ಬಗ್ಗೆ ಪಾರದರ್ಶಕತೆ ಇಲ್ಲದೇ ಇರುವ ಬಗ್ಗೆ ಆಡಳಿತಾರೂಢ ರಿಪಬ್ಲಿಕನ್ ಪಕ್ಷದ ಸಂಸದರೇ ಟ್ರಂಪ್ ವಿರುದ್ಧ ಅಸಮಾಧಾನ ಹೊರ ಹಾಕಿದ್ದಾರೆ. ನಷ್ಟ ಸರಿದೂಗಿಸಲು ಪೆಂಟಗನ್ ಭಾರೀ ಮೊತ್ತದ ಬಜೆಟ್ ನೀಡುವಂತೆ ಕೇಳುತ್ತಿದ್ದು, ಈ ಬಗ್ಗೆ ಹಲವು ವಾರಗಳಿಂದ ಟ್ರಂಪ್ ಅವರನ್ನು ಕೇಳುತ್ತಿದ್ದರೂ ಮಾಹಿತಿ ಸಿಗುತ್ತಿಲ್ಲ ಎಂದು ಮತ್ತೊಬ್ಬ ಸಂಸದರು ಬೇಸರ ಹೊರಹಾಕಿದ್ದಾರೆ.

ನಮ್ಮ ಸಂಸದರಲ್ಲಿ ಯಾರಿಗೂ ಏನೂ ತಿಳಿದಿಲ್ಲ. ಹಾಗೆಂದ ಮಾತ್ರಕ್ಕೆ ನಾವು ಕೇಳಿಲ್ಲ ಎಂದಲ್ಲ. ನಾವು ಈ ಬಗ್ಗೆ ಹಲವು ವಾರಗಳಿಂದ ಕೇಳುತ್ತಿದ್ದೇವೆ. ಆದರೆ, ನಿರ್ದಿಷ್ಟ ಮಾಹಿತಿ ನೀಡುತ್ತಿಲ್ಲ. ಈ ನಡುವೆ, ಪೆಂಟಗನ್ ದಾಖಲೆಯ ಹೆಚ್ಚಿನ ಬಜೆಟ್ ಅನ್ನು ಕೇಳುತ್ತಿದೆಯೆಂದು ಅವರು ಹೇಳಿದ್ದಾರೆ. ಇರಾನ್ ವಿರುದ್ಧ ಯುದ್ಧಕ್ಕೆ ಹಣಕಾಸು ಒದಗಿಸಲು ಪೆಂಟಗನ್, ಅಮೇರಿಕಾ ಕಾಂಗ್ರೆಸ್‌ನಿಂದ 200 ಬಿಲಿಯನ್ ಡಾಲರ್‌ಗಿಂತಲೂ ಹೆಚ್ಚು ಹಣವನ್ನು ಕೇಳುತ್ತಿದೆ ಎಂದು ವರದಿಯಾಗಿದೆ. ಸಂಘರ್ಷದ ಮೊದಲ ವಾರದಲ್ಲಿಯೇ, ಅಮೇರಿಕಾ ತನ್ನ ಮಿಲಿಟರಿ ಕಾರ್ಯಾಚರಣೆಗಳಿಗೆ 11 ಬಿಲಿಯನ್ ಡಾಲರ್‌ಗಿಂತಲೂ ಹೆಚ್ಚು ಖರ್ಚು ಮಾಡಿತ್ತು. ಅದು ಈಗ 70 ಬಿಲಿಯನ್ ಡಾಲರ್ ಆಗಿರುವ ಸಾಧ್ಯತೆ ಇದೆ ಎಂದು ವರದಿ ತಿಳಿಸಿದೆ. ಯುದ್ಧ ಪ್ರಾರಂಭವಾಗುವ ಮೊದಲು, ಟ್ರಂಪ್ 1.5 ಟ್ರಿಲಿಯನ್ ಡಾಲಲ್ ರಕ್ಷಣಾ ಬಜೆಟ್‌ಗೆ ಕರೆ ನೀಡಿದ್ದರು. ಇದು ಹಿಂದಿನ ವರ್ಷಕ್ಕಿಂತ ಶೇ. 50ಕ್ಕಿಂತ ಹೆಚ್ಚು ಹೆಚ್ಚಳವಾಗಿದೆ. ಅಮೇರಿಕಾ ಕಾಂಗ್ರೆಸ್ ಈಗಾಗಲೇ 2026ಕ್ಕೆ 838.5 ಬಿಲಿಯನ್ ಡಾಲರ್ ರಕ್ಷಣಾ ಬಜೆಟ್ ಅನ್ನು ಅನುಮೋದಿಸಿದೆ.

ಆಗಿರುವ ನಷ್ಟ ಏನು: ಮಾರ್ಚ್ 1 ರಂದು ಕುವೈತ್ ವಿಮಾನವು ಇರಾನ್ ಫೈಟರ್ ಜೆಟ್ ಎಂದು ಭಾವಿಸಿ ಅಮೇರಿಕದ ಮೂರು ಎಫ್-15ಇ ಫೈಟರ್ ಜೆಟ್‌ಗಳನ್ನು ಹೊಡೆದುರುಳಿಸಿತ್ತು. ಮಾರ್ಚ್ 16ರಂದು -35 ಸ್ಟೆಲ್ತ್ ಜೆಟ್ ಮೇಲೆ ಇರಾನ್ ಗುಂಡಿನ ದಾಳಿ ನಡೆಸಿ ಹೊಡೆದುರುಳಿಸಿತ್ತು. ಇರಾಕ್ ಮೇಲೆ ಹಾರಾಡುತ್ತಿದ್ದ ಎರಡು ಕೆಸಿ-135 ಇಂಧನ ತುಂಬುವ ವಿಮಾನಗಳ ನಡುವೆ ಆಕಾಶದಲ್ಲಿ ಡಿಕ್ಕಿ ಸಂಭವಿಸಿ ಆರು ಸಿಬ್ಬಂದಿ ಮೃತಪಟ್ಟಿದ್ದರು. ಆದರೆ, ಅವುಗಳನ್ನು ತಾವೇ ಹೊಡೆದುರುಳಿಸಿದ್ದು ಎಂದು ಇರಾನ್ ಹೇಳಿದೆ. ಸೌದಿ ಅರೇಬಿಯಾದ ಪ್ರಿನ್ ಸುಲ್ತಾನ್ ವಾಯುನೆಲೆಯ ಮೇಲೆ ಇರಾನ್ ಕ್ಷಿಪಣಿ ದಾಳಿಯಲ್ಲಿ ಐದು ಕೆಸಿ-135 ಯುದ್ಧ ವಿಮಾನಗಳನ್ನು ಹೊಡೆದುರುಳಿಸಿತ್ತು. ಒಂದು ಡಜನ್‌ಗೂ ಹೆಚ್ಚು -9 ರೀಪರ್ ಡ್ರೋನ್‌ಗಳನ್ನು ಇರಾನ್ ನಾಶ ಮಾಡಿದೆ. ಸೌದಿ ಅರೇಬಿಯಾ, ಕತಾರ್ ಮತ್ತು ಜೋರ್ಡಾನ್‌ನಲ್ಲಿರುವ ಅಮೆರಿಕ ನೆಲೆಗಳಲ್ಲಿನ ವಿಮಾನಗಳು, ರಾಡಾರ್ ವ್ಯವಸ್ಥೆಗಳನ್ನು ಸಹ ಇರಾನ್ ಹಾನಿಗೊಳಿಸಿದೆ. ಮಾರ್ಚ್ 12 ರಂದು ವಿಮಾನವಾಹಕ ನೌಕೆ ಯುಎಸ್‌ಎಸ್ ಜೆರಾಲ್ಡ್ ಆರ್. ಫೋರ್ಡ್‌ನಲ್ಲಿ ಬೆಂಕಿ ಕಾಣಿಸಿ ಕೊಂಡಿತ್ತು. ಇದೂ ಸಹ ಒರಾಮ್ ದಾಳಿಯಿಂದಲೇ ಆಗಿದೆ ಎನ್ನಲಾಗುತ್ತಿದೆ.

## ಶಾಲೆಗಳಲ್ಲಿ ಕನ್ನಡ ಪತ್ರಿಕೆ ಓದುವುದು ಕಡ್ಡಾಯ



• ಪ್ರಜೋದಯ ವರದಿ

**ಬೆಂಗಳೂರು:** ಶಾಲೆಗಳಲ್ಲಿ ಪ್ರತಿದಿನ 10 ನಿಮಿಷ ಕನ್ನಡ ಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಲು ಶಾಲಾ ಶಿಕ್ಷಣ ಇಲಾಖೆ ಸೂಚಿಸಿದೆ.

ಎಲ್ಲಾ ಸರ್ಕಾರಿ, ಅನುದಾನಿತ ಹಾಗು ಅನುದಾನರಹಿತ ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನೆಯ ನಂತರ ವಿದ್ಯಾರ್ಥಿಗಳು ಕನ್ನಡ ಪತ್ರಿಕೆಗಳನ್ನು ಓದಬೇಕು. ಶಾಲೆಗಳಲ್ಲಿ ಪ್ರತಿದಿನ ಕನಿಷ್ಟ 10 ರಿಂದ 15 ನಿಮಿಷ ಪತ್ರಿಕೆಗಳನ್ನು ಓದುವುದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯಲ್ಲಿ ಸಹಾಯವಾಗುತ್ತದೆ. ಪ್ರಸ್ತುತ ಘಟನೆಗಳ ಕುರಿತು ಸಾಮಾನ್ಯ ಜ್ಞಾನ ಹೆಚ್ಚುತ್ತದೆ. ಪದ ಸಂಪತ್ತು, ಭಾಷೆ ಹಾಗು ಬರವಣಿಗೆ ಕೌಶಲಗಳೂ ಉತ್ತಮವಾಗುತ್ತವೆಂದು ಶಾಲಾ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಶ್ಮಿ ಮಹೇಶ್ ತಿಳಿಸಿದ್ದಾರೆ.

## ಮಲೆನಾಡಿನಾದ್ಯಂತ ಕಟ್ಟುಪಾಡಿನ ದೇವಿರಮ್ಮ-ಸಬ್ಬಮ್ಮ ಸುಗ್ಗಿ ಸಂಭ್ರಮ

• ಪ್ರಜೋದಯ ವರದಿ

**ಸಕಲೇಶಪುರ:** ಮಲೆನಾಡಿನ ಹಸಿರು ಹೊದಿಕೆಯ ನಡುವೆ ಸಂಪ್ರದಾಯ, ಭಕ್ತಿ ಮತ್ತು ಪ್ರಕೃತಿ ಆರಾಧನೆ ಒಂದಾಗಿ ಮೂಡಿಬರುವ ವಿಶಿಷ್ಟ ಹಬ್ಬವೇ ಸುಗ್ಗಿ ಉತ್ಸವ. ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲಿ ದೇವಿರಮ್ಮ ಹಾಗೂ ಸಬ್ಬಮ್ಮ ದೇವಿಯರ ಸುಗ್ಗಿ ಉತ್ಸವಗಳು ಶ್ರದ್ಧಾಭಕ್ತಿಯಿಂದ ಆರಂಭಗೊಂಡಿದ್ದು, ಗ್ರಾಮೀಣ ಬದುಕಿನ ವೈಶಿಷ್ಟ್ಯವನ್ನು ಮತ್ತೊಮ್ಮೆ ಅನಾವರಣಗೊಳಿಸುತ್ತಿವೆ.

ಮಳೆಗಾಲದ ಮುನ್ನ ಕೃಷಿಕರು ತಮ್ಮ ಕೃಷಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಸಮಯ ಸಮೀಪಿಸುತ್ತಿರುವ ಹಿನ್ನಲೆಯಲ್ಲಿ, ಗ್ರಾಮ ಸುಭಿಕ್ಷವಾಗಿರಲಿ, ಉತ್ತಮ ಮಳೆ ಮತ್ತು ಬೆಳೆ ದೊರಕಲಿ ಎಂಬ ಆಶಯದೊಂದಿಗೆ ಗ್ರಾಮಸ್ಥರು ಗ್ರಾಮದೇವತೆಗಳಿಗೆ ಸಾಮೂಹಿಕ ಪೂಜೆ ಸಲ್ಲಿಸುವುದು ಈ ಉತ್ಸವದ ಮುಖ್ಯ ಉದ್ದೇಶವಾಗಿದೆ.

ತಲೆತಲಾಂತರಗಳಿಂದ ನಡೆದುಕೊಂಡು ಬಂದಿರುವ ಈ ಆಚರಣೆಯಲ್ಲಿ, ಊರಿನ ಹೊರಗಡೆ ವಾಸಿಸುವವರೂ ಸಹ ಹಬ್ಬದ ನಿಮಿತ್ತ ಗ್ರಾಮಕ್ಕೆ ಆಗಮಿಸಿ, ಇಡೀ ಊರನ್ನು ಸಂಭ್ರಮದ ವಾತಾವರಣದಲ್ಲಿ ತೇಲಿಸುತ್ತಾರೆ.

**ಸುಗ್ಗಿ ಸಂಭ್ರಮದ ವಿಶೇಷತೆ**

ಸುಗ್ಗಿ ಪ್ರಾರಂಭವಾದ ಕ್ಷಣದಿಂದಲೇ ಗ್ರಾಮಗಳಲ್ಲಿ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸಲಾಗುತ್ತದೆ. ಸುಗ್ಗಿ ಸಾರು ಎನ್ನುವ ಆಚರಣೆಯಡಿ ಸುಮಾರು 15 ದಿನಗಳ ಕಾಲ ಹಸಿ ಮರಗಳನ್ನು ಕಡಿದು ಬಿಡುವುದಿಲ್ಲ, ಒಣಗಿದ ಗಿಡ ಬಳ್ಳಿಗಳನ್ನು ಮುರಿಯುವುದಿಲ್ಲ. ಹಗಲು ವೇಳೆಯಲ್ಲಿ ಅತಿಥಿಗಳನ್ನು ಮನೆಗೆ ಒಳಗೆ



ಬರಮಾಡಿಕೊಳ್ಳುವುದಿಲ್ಲ, ನಕ್ಷತ್ರಗಳು ಕಾಣಿಸಿಕೊಂಡ ನಂತರವೇ ಆತಿಥ್ಯ ನೀಡುತ್ತಾರೆ. ಹೊರಗಡೆಯಿಂದ ಆಹಾರ ಸಾಮಾಗ್ರಿಗಳನ್ನು ಖರೀದಿಸುವುದಕ್ಕೂ ನಿರ್ಬಂಧವಿದೆ. ಇಂತಹ ನಿಯಮಗಳು ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಕಟ್ಟುನಿಟ್ಟಾಗಿ ಪಾಲನೆ ಆಗುತ್ತಿರುವುದು ವಿಶೇಷ.

**ದೇವಿರಮ್ಮ-ಸಬ್ಬಮ್ಮ ಆರಾಧನೆ**

ಏಪ್ರಿಲ್ ತಿಂಗಳಲ್ಲಿ ಕೊಡಗು ಗಡಿಭಾಗದ ಕೂತಿ ನಾಡು ವ್ಯಾಪ್ತಿಗೆ ಸೇರಿದ ಕೂತಿ, ಯಡದಂಟೆ ಸೇರಿ ಸಕಲೇಶಪುರ ತಾಲೂಕಿನ ಓಡಳ್ಳಿ, ಬಾಣಗೇರಿ, ಗೊದ್ದು, ಬ್ಯಾಗಡಹಳ್ಳಿ, ಹೊಂಗಡಹಳ್ಳಿ, ಯರಗಳ್ಳಿ, ಅತ್ತಿಹಳ್ಳಿ, ಮಾವಿನೂರು, ಹೆತ್ತೂರು, ಬೊಮ್ಮನಕೆರೆ ಸುಮಾರು 200ಕ್ಕೂ ಹೆಚ್ಚು ಗ್ರಾಮಗಳ ಜನರು ಒಂದೇ ವೇದಿಕೆಯಲ್ಲಿ ಸೇರಿ ದೇವಿರಮ್ಮ ಹಾಗೂ ಸಬ್ಬಮ್ಮ ದೇವಿಯರಿಗೆ ಸಂಪ್ರದಾಯ ಬದ್ಧ ಪೂಜೆ ಸಲ್ಲಿಸುತ್ತಾರೆ.

ಉತ್ಸವದ ಕೊನೆಯ ದಿನ ದೇವರ ಬನದಲ್ಲಿ ಅಳವಡಿಸಿದ ಬೃಹತ್ ಕಲ್ಲಿನ ಕಂಬಕ್ಕೆ ಬೆತ್ತದ ಉಯ್ಯಾಲೆ ಕಟ್ಟಿಕೊಂಡು ನಾಲ್ವರು ದೇವರ ಒಡೆಯಕಾರರನ್ನು ತೂಗುವ ಜಾನಪದ ಸಂಪ್ರದಾಯವು ಗ್ರಾಮಸ್ಥರ ಭಕ್ತಿ ಭಾವವನ್ನು ಪ್ರತಿಬಿಂಬಿಸುವ ಅಪರೂಪದ ಕ್ಷಣವಾಗಿದೆ.

**ಉತ್ಸವದ ಪ್ರಮುಖ ಕಾರ್ಯಕ್ರಮಗಳು**

ಸುಗ್ಗಿ ಉತ್ಸವದಲ್ಲಿ ಗುಮ್ಮನಮರಿ ಪೂಜೆ, ಸಾಮೂಹಿಕ ಭೋಜನ, ಊರೊಡೆಯನ ಪೂಜೆ, ಬೆಂಕಿ ಹಾಯುವುದು, ಮೊದಲ ಬೇಟೆ, ಊರು ಸುಗ್ಗಿ, ದೇವರ ಗಂಗಾಸ್ನಾನ ಹಾಗೂ ಮಹಾಪೂಜೆಗಳು ಪ್ರಮುಖ ಅಂಗಗಳಾಗಿವೆ. ಪ್ರತಿಯೊಂದು ವಿಧಿ ವಿಧಾನವೂ ಪ್ರಕೃತಿ ಮತ್ತು ದೇವತಾ ಆರಾಧನೆಯೊಂದಿಗೆ ಸಂಬಂಧ ಹೊಂದಿದ್ದು, ಗ್ರಾಮೀಣ ಸಂಸ್ಕೃತಿಯ ಆಳವನ್ನು ತೋರಿಸುತ್ತದೆ.

**ಭೂಮಿ ತಾಯಿಗೆ ಕೃತಜ್ಞತೆ**

ಭತ್ತದ ಕೃಷಿ ಮುಗಿದ ನಂತರ, ಮುಂದಿನ ಹಂಗಾಮಿಗೆ ಮಳೆ ಅನುಕೂಲವಾಗಲಿ ಎಂಬ ಆಶಯದಿಂದ ಭೂಮಿತಾಯಿಗೆ ಪೂಜೆ ಸಲ್ಲಿಸುವುದು ರೈತರ ಸಂಪ್ರದಾಯ. ಪ್ರಕೃತಿ ದೇವಿ ಕೋಪಗೊಳ್ಳದೆ ಕಾಲಕಾಲಕ್ಕೆ ಮಳೆಯನ್ನೂ ಬೆಳೆನ್ನೂ ನೀಡಲಿ ಎಂಬ ಪ್ರಾರ್ಥನೆ ಈ ಹಬ್ಬದ ಮೂಲ ತತ್ವವಾಗಿದೆ.

**ಬಂದೂಕುಗಳಿಗೆ ಪೂಜೆ ವಿಶಿಷ್ಟ ಸಂಪ್ರದಾಯ**

ಹೆತ್ತೂರು ವ್ಯಾಪ್ತಿಯಲ್ಲಿ ಸುಗ್ಗಿ ಆರಂಭದ ಅಂಗವಾಗಿ ಗ್ರಾಮಸ್ಥರು ತಮ್ಮ ಮನೆಗಳಲ್ಲಿ ಇರುವ ಬಂದೂಕುಗಳನ್ನು ದೇವಿಯ ಕಟ್ಟೆಗೆ ತಂದು ಪೂಜೆ ಸಲ್ಲಿಸುವ ಸಂಪ್ರದಾಯ ಇಂದಿಗೂ ಜೀವಂತವಾಗಿದೆ. ನಂತರ ಬಂದೂಕುಗಳಿಂದ ತೆಂಗಿನಕಾಯಿಗೆ ಗುಂಡು ಹೊಡೆಯುವ ಮೂಲಕ ಉತ್ಸವಕ್ಕೆ ಚಾಲನೆ ನೀಡಲಾಗುತ್ತದೆ. ಇದು ಪಾರಂಪರಿಕ ಧೈರ್ಯ ಮತ್ತು ಆಚರಣೆಯ ಸಂಕೇತವಾಗಿ ಕಾಣಲ್ಪಡುತ್ತದೆ.

**ಹೆತ್ತೂರು ಸುಗ್ಗಿ ಆರಂಭ**



ಸಕಲೇಶಪುರ ತಾಲೂಕಿನ ಪ್ರಮುಖ ಉತ್ಸವಗಳಲ್ಲಿ ಒಂದಾದ ಹೆತ್ತೂರು ದೇವಿರಮ್ಮ ಸುಗ್ಗಿ ಮಂಗಳವಾರದಿಂದ ಆರಂಭಗೊಂಡಿದೆ. ಸಾವಿರಾರು ಭಕ್ತರು ಭಾಗವಹಿಸುವ ಈ ಉತ್ಸವದಲ್ಲಿ ಜಾನಪದ ಕಲೆಗಳ ಪ್ರದರ್ಶನವೂ ನಡೆಯುತ್ತದೆ. ದೇವಿಯ ಆಶೀರ್ವಾದದಿಂದ ರೈತರು ಸಮೃದ್ಧ ಬದುಕು ನಡೆಸುತ್ತಿದ್ದಾರೆಂಬ ನಂಬಿಕೆ ಗ್ರಾಮಸ್ಥರಲ್ಲಿ ಗಾಢವಾಗಿದೆ.

ಈ ಆಚರಣೆ ನಮ್ಮ ಪೂರ್ವಜರಿಂದ ಬಂದ ಅಮೂಲ್ಯ ಪರಂಪರೆ. ಮುಂದಿನ ಪೀಳಿಗೆಗೂ ಇದನ್ನು ಕಾಪಾಡಿಕೊಂಡು ಹೋಗಬೇಕೆಂದು ಗ್ರಾಮಸ್ಥ ಪವನ್ ಕುಮಾರ್ ಕಾಗಿನೆರೆ ತಿಳಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019